# ಯೋಹಾನನು ಬರೆದ ಮೊದಲನೆಯ ಪತ್ರಿಕೆ

**ಲೇಖಕ:**

ಕರ್ತನಾದ ಯೇಸುವಿನ ಮೂಲ ಶಿಷ್ಯರಲ್ಲಿ ಒಬ್ಬನಾದ ಯೋಹಾನನು

**ದಿನಾಂಕ:**

ಬಹುಶಃ ಕ್ರಿ.ಶ. 85 ಮತ್ತು ಕ್ರಿ. ಶ. 95

**ವಿಷಯಗಳು:**

ಈ ಪತ್ರಿಕೆಯನ್ನು ದೇವರ ಕೃಪೆಯಿಂದ, ಕ್ರಿಸ್ತನಲ್ಲಿ ಹೊಸ ಆತ್ಮೀಕ ಹುಟ್ಟನ್ನು ಹೊಂದಿಕೊಂಡವರೆಲ್ಲರಿಗೆ ಬರೆಯಲ್ಪಟ್ಟಿದೆ. ಇವರು ದೇವರಿಂದ ಪ್ರೀತಿಸಲ್ಪಟ್ಟ ಆತನ ಅಮೂಲ್ಯ ಮಕ್ಕಳಾಗಿದ್ದಾರೆ (2:1,12,13,18,28; 3:7; 4:4; 5:21). ಅವರು ಕುಟುಂಬದ ಸದಸ್ಯರು ಮತ್ತು ದೇವರ ಕುಟುಂಬದವರಾಗಿದ್ದಾರೆ, ಮತ್ತು ಅವರು ಈ ಮಹತ್ವವುಳ್ಳ ಸತ್ಯಕ್ಕೆ ತಕ್ಕಹಾಗೆ ನಡೆದುಕೊಳ್ಳಬೇಕೆಂದು ಯೋಹಾನನು ಬರೆಯುತ್ತಾನೆ. ಅದೇನೆಂದರೆ, ಅವರು ದೇವರ ಮತ್ತು ಇತರರ ಅನ್ಯೋನ್ಯತೆಯಲ್ಲಿ ಜೀವಿಸಬೇಕು (1:3-7), ಅವರು ಏನಾದರು ಪಾಪ ಮಾಡಿದ್ದರೆ ಅಥವಾ ಅಪರಾಧಮಾಡಿದ ಮನೋಭಾವನೆಯಲ್ಲಿರುವುದಾದರೆ ಅದನ್ನು ಒಪ್ಪಿಕೊಂಡು ಕ್ಷಮಾಪಣೆಯನ್ನು ಹೊಂದಬೇಕು (1:8—2:2), ತಂದೆಯಾದ ದೇವರ ಅಪ್ಪಣೆಗಳಿಗೆ ವಿಧೇಯರಾಗಬೇಕು (2:3-7), ಮತ್ತು ಒಬ್ಬರನ್ನೊಬ್ಬರು ಪ್ರೀತಿಸಬೇಕು (3:11-20). ಈ ಪತ್ರಿಕೆಯ ಮೂರು ಪ್ರಮುಖ ಪದಗಳು ಯಾವುವೆಂದರೆ "ಜೀವ" (1:1-2; 2:25; 3:15; 5:11-12,13,20), "ಬೆಳಕು" (1:5-7; 2:8-9,10) ಮತ್ತು "ಪ್ರೀತಿ" (3:11-18; 4:7-12). ಮತ್ತೊಂದು ಪ್ರಮುಖವಾದ ಪದ "ತಿಳಿದುಕೊ" (2:3,5; 4:6-7; 5:13,18), ಮತ್ತು ಮುಖ್ಯವಾದ ವಿಷಯ ಭರವಸೆ – ನಾವು ದೇವರ ಕುಂಬದಲ್ಲಿ ನಿಜವಾಗಿಯೂ ಹುಟ್ಟಿದ್ದೇವೆಂಬದನ್ನು ನಾವು ಹೇಗೆ ತಿಳಿದುಕೊಳ್ಳುವುದು.

# 1 1

**1:1** "*ಆದಿಯಿಂದ*"– ಆದಿ 1:1; ಯೋಹಾನ 1:1.

"*ನಾವು*"– ಯೇಸುವಿನ ಮೂಲ ಶಿಷ್ಯರೆಲ್ಲರ ಬಗ್ಗೆ ಯೋಹಾನನು ಇಲ್ಲಿ ಮಾತನಾಡುತ್ತಾನೆ. ಯೇಸುವು ಲೋಕದಲ್ಲಿರುವಾಗ ಅವರಿಗೆ ಆತನು ವಯಕ್ತಿಕವಾಗಿ ಗೊತ್ತಿತ್ತು, ಆತನು ಹೇಳಿದ್ದನ್ನು ಕೇಳಿಸಿಕೊಂಡಿದ್ದರು ಮತ್ತು ಆತನು ಮಾಡಿದ್ದನ್ನು

ನೋಡಿದ್ದರು. 2 ಪೇತ್ರ 1:16; ಯೋಹಾನ 15:27; ಅಪೊ 4:20 ಹೋಲಿಸಿರಿ.

"*ಕೈಯಿಂದ ಮುಟ್ಟಿದ್ದೇವೆ*"– ಲೂಕ 24:39; ಯೋಹಾನ 20:27 ನೋಡಿರಿ. ಇದು ಕ್ರಿಸ್ತನ ಪುನರುತ್ಥಾನದ ನಂತರ.

"*ಜೀವವಾಕ್ಯ*"– ಕ್ರಿಸ್ತನು ತಾನೇ ವಾಕ್ಯವಾಗಿದ್ದಾನೆ, ಮನುಷ್ಯನಿಗೆ ದೇವರ ಸಂಪೂರ್ಣವಾದ ಪ್ರಕಟನೆ. ಮತ್ತು ಆತನು ನಿತ್ಯಜೀವವಾಗಿದ್ದಾನೆ (5:20; ಯೋಹಾನ 1:4; 5:26; 14:6), ಮತ್ತು ಜನರಿಗೆ ನಿತ್ಯಜೀವವನ್ನು ಕೊಡಲು ಆತನು ಬಂದನು ಯೋಹಾನ 10:10; 6:51 . ಆತನು ಮಾತಾಡಿದ ಮಾತುಗಳು ಸಹ "ಜೀವವಾಗಿತ್ತು" ರೋಮಾ 5:21; ಯೋಹಾನ 6:63.
**2**

**1:2** "*ನಿತ್ಯಜೀವ*"– 5:11-12; ಯೋಹಾನ 3:16.

"*ತಂದೆಯ ಬಳಿಯಲ್ಲಿದ್ದು*"– ಯೋಹಾನ 1:2; 17:5. ಕ್ರಿಸ್ತನು ತಂದೆ 1 ಕೊರಿಂಥ 8:5-6; 2 ಯೋಹಾನ 3 ಟಿಪ್ಪಣಿ ನೋಡಿರಿ.

"*ಪ್ರತ್ಯಕ್ಷವಾಯಿತು*"– ಕ್ರಿಸ್ತನು ಪ್ರತ್ಯಕ್ಷವಾದಾಗ ನಿತ್ಯಜೀವವು ಪ್ರತ್ಯಕ್ಷವಾಯಿತು (ಯೋಹಾನ 1:14; 2 ತಿಮೊ 1:10). **3**

**1:3** "*ನಾವು ಕಂಡು ಕೇಳಿದ್ದು*"– ಮೂರು ವಚನಗಳಲ್ಲಿ ಇದನ್ನು ಅವನು ಮೂರು ಸಾರಿ ಹೇಳಿದ್ದಾನೆ. ಅವನು ಮತ್ತು ಇತರ ಅಪೊಸ್ತಲರು ಇತರರಿಂದ ಸಂಗ್ರಹಿಸಿದ ಅಥವಾ ತಾವೇ ಕಂಡುಹಿಡಿದ ಕಥೆಗಳೊಂದಿಗೆ ಹಾದುಹೋಗಲಿಲ್ಲವೆಂದು ದೃಢವಾಗಿ ಅವನು ಹೇಳುತ್ತಿದ್ದಾನೆ. ಅವರು ಏನು ಮಾತನಾಡುತ್ತಿದ್ದಾರೆಂದು ಅವನಿಗೆ ತಿಳಿದಿತ್ತು ಯಾಕಂದರೆ ಅವರು ವಯಕ್ತಿಕವಾಗಿ ಯೇಸುವನ್ನು ನೋಡಿದ್ದರು ಮತ್ತು ಕೇಳಿಸಿಕೊಂಡಿದ್ದರು.

"*ಅನ್ಯೋನ್ಯತೆ*"– ಅಪೊ 2:42; 1 ಕೊರಿಂಥ 1:9; 2 ಕೊರಿಂಥ 13:14; ಫಿಲಿಪ್ಪಿ 3:10. ಗ್ರೀಕ್ ಪದದ ಅರ್ಥ ಒಟ್ಟಾಗಿ ಹಂಚಿಕೊಳ್ಳುವುದು. ಕ್ರಿಸ್ತನ ಸತ್ಯವನ್ನು ಪ್ರಕಟಿಸಲು ಯೋಹಾನನಿಗೆ ಒಳ್ಳೆಯ ಕಾರಣವಿತ್ತು. ಆ ಕಾರಣ ಇದಾಗಿದೆ. ಬೇರೆ ಕಾರಣಗಳು ವ.4; 2:1,12-14; 5:13 ರಲ್ಲಿ ಕಾಣುತ್ತೇವೆ.

"*ತಂದೆಯ ಸಂಗಡಲೂ ಆತನ ಮಗನ ಸಂಗಡಲೂ...*"– ಯೋಹಾನನು ತ್ರೈಯೇಕ ದೇವರ ಇಬ್ಬರು ವ್ಯಕ್ತಿಗಳನಡುವೆ ವ್ಯತ್ಯಾಸವನ್ನು ಗುರುತಿಸುತ್ತಾನೆ (ತ್ರೈಯೇಕತ್ವದ ವಿಷಯವಾಗಿ ಟಿಪ್ಪಣಿ ಮತ್ತಾಯ 3:16-17), ಆದರೆ ಅವರು ಎಷ್ಟು ಒಗ್ಗಟ್ಟಾಗಿರುತ್ತಾರೆಂದರೆ ಒಬ್ಬರೊಂದಿಗೆ ಅನ್ಯೋನ್ಯತೆಯಲ್ಲಿರುವುದು ಇನ್ನೊಬ್ಬರೊಂದಿಗೆ ಅನ್ಯೋನ್ಯತೆಯಲ್ಲಿರುವುದಾಗಿದೆ. ಕ್ರಿಸ್ತನ ದೈವತ್ವದ ವಿಷಯವಾಗಿ ಇತರ ಉಲ್ಲೇಖಗಳನ್ನು ಫಿಲಿಪ್ಪಿ 2:6; ಲೂಕ 2:11 ಕಾಣಹಬುದು. ದೇವರೊಂದಿಗೆ ಅನ್ಯೋನ್ಯತೆ ಎಂದರೆ ಆತನನ್ನು ತಿಳಿದುಕೊಳ್ಳುವುದಾಗಿದೆ (ಯೋಹಾನ 17:3), ಆತನ ಸಂತೋಷವನ್ನು, ಆತನ ಸಮಾಧಾನವನ್ನು, ಆತನ ಯೋಚನೆಯನ್ನು, ಆತನ ಈ ಭೂಮಿಯ ಮೇಲೆ ಆತನ ಕೆಲಸವನ್ನು

ಹಂಚಿಕೊಳ್ಳುವುದಾಗಿದೆ. ದೇವರಲ್ಲಿರುವ ವಿಶ್ವಾಸಿಗಳಿಗೆ ಮಾತ್ರವೇ ದೇವರು ಯಾರೆಂದು ತಿಳಿದಿದೆ ಮತ್ತು ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಿದ್ದಾರೆ. ಬೇರೆಯಾರಿಗೂ ನಿಜವಾದ ಜ್ಞಾನೋದಯ ಮತ್ತು ಆತ್ಮೀಕ ಜೀವಿತವು ಇರುವುದಿಲ್ಲ (5:11-12). **4**

**1:4** *“ಸಂತೋಷ”*– ಲೂಕ 2:10; ಯೋಹಾನ 15:11; 16:22,24; 17:13; ರೋಮಾ 14:17; ಗಲಾ 5:22. ಸತ್ಯವನ್ನು ಹೃದಯದಲ್ಲಿ ಸ್ವೀಕರಿಸಿಕೊಳ್ಳುವುದು ಮತ್ತು ಜೀವನದಲ್ಲಿ ಅಭ್ಯಾಸಿಸುವುದೇ ನಿಜವಾದ ಸಂತೋಷದ ಫಲವಾಗಿದೆ. ಆದ್ದರಿಂದ ಕ್ರಿಸ್ತನಿಂದ ಅವನು ಕಲಿತ ಸತ್ಯಗಳನ್ನು ಯೋಹಾನನು ಅವರಿಗೆ ಬರೆಯುತ್ತಾನೆ. ಕ್ರಿಸ್ತನ ಸತ್ಯದ ಸಂಪೂರ್ಣ ಜ್ಞಾನ ಮತ್ತು ಅದಕ್ಕೆ ಸಂಪೂರ್ಣವಾಗಿ ವಿಧೇಯರಾಗುವುದೇ ಸಂಪೂರ್ಣ ಸಂತೋಷ. **5**

**1:5** *“ದೇವರು ಬೆಳಕಾಗಿದ್ದಾನೆ”*– ಭೌತಿಕವಾದ ಬೆಳಕಲ್ಲ, ಆದರೆ, ಆತ್ಮೀಕವಾದ ಬೆಳಕು. ಹೊಸ ಒಡಂಬಡಿಕೆಯಲ್ಲಿ ಕತ್ತಲೆಯು ಪಾಪವನ್ನು ಮತ್ತು ಆಧ್ಯಾತ್ಮಿಕ ವಿಷಯಗಳ ಅಜ್ಞಾನವನ್ನು ಸೂಚಿಸುತ್ತದೆ; ಬೆಳಕು ಪರಿಶುದ್ಧತೆ ಮತ್ತು ಸತ್ಯವನ್ನು ಸೂಚಿಸುತ್ತದೆ – ಮತ್ತಾಯ 4:16; ಲೂಕ 2:32; ಯೋಹಾನ 1:4-5; 3:19-20; 8:12; 11:10; 12:36,46; ಅಪೊ 26:18; ರೋಮಾ 13:12; 2 ಕೊರಿಂಥ 4:4,6; ಎಫೆ 5:8-9,13,14; 1 ತಿಮೊ 6:16.

*“ಎಷ್ಟು ಮಾತ್ರವೂ ಕತ್ತಲೆಯಿಲ್ಲ”*– ಲೋಕದಲ್ಲಿ ಬಹಳವಾದ ದುಷ್ಟತ್ವವಿದೆ, ಆದರೆ ದೇವರಲ್ಲಿ ಅದು ಯಾವುದೂ ಎಷ್ಟು ಮಾತ್ರಕ್ಕೂ ಇಲ್ಲ. ಆತನು ಅದನ್ನು ಉಂಟುಮಾಡಲಿಲ್ಲ ಮತ್ತು ದೇವರು ಅದನ್ನು ಯಾವುದೇ ವಿಧದಲ್ಲಿ ಸಮ್ಮತಿಸುವುದಿಲ್ಲ. ಆತನು ಸಂಪೂರ್ಣವಾಗಿ ಪರಿಶುದ್ಧನು ಮತ್ತು ಮಹಿಮೆಯಲ್ಲಿ (ವೈಭಯುತವಾಗಿ) ಶುದ್ಧನಾಗಿದ್ದಾನೆ (ಯಾಜಕ 20:7; ಯೆಶಾಯ 6:3). **6**

**1:6** *“ನಾವು ಹೇಳಿದರೆ”*– ಪಾಪದಲ್ಲಿ ಮತ್ತು ದೋಷದಲ್ಲಿ ಜೀವಿಸುತ್ತಾ ಸತ್ಯ ಮತ್ತು ಪರಿಶುದ್ಧತೆಯಲ್ಲಿ ಅನ್ಯೋನ್ಯತೆ ಹೊಂದುವುದು ಅಸಾಧ್ಯವಾದ ಕಾರ್ಯವಾಗಿದೆ. ದೇವರನ್ನು ನಿರಾಕರಿಸುವುದು ಪಾಪವನ್ನು ಆರಿಸಿಕೊಳ್ಳುವುದಾಗಿದೆ, ಮತ್ತು ನಾವು ಆತನನ್ನು ನಿರಾಕರಿಸಿದರೆ ಆತನೊಂದಿಗೆ ಹೇಗೆ ನಾವು ಎಲ್ಲವನ್ನು ಹಂಚಿಕೊಳ್ಳಲು ಸಾಧ್ಯ? 2 ಕೊರಿಂಥ 6:14 ನೋಡಿರಿ. ದುಃಖಕರವಾದ ಕಾರ್ಯವೇನೆಂದರೆ, ಅನೇಕರು ದೇವರನ್ನು ತಿಳಿದುಕೊಂಡಿದ್ದೇವೆಂದು ಹೇಳಿಕೊಂಡು ಆತನನ್ನು ತಿಳಿಯದವರಾಗಿದ್ದಾರೆ, ಮತ್ತು ಆತನು ಅವರಿಗೆ ಗೊತ್ತಿಲ್ಲವೆಂದು ಅವರು ಜೀವಿಸುವ ಜೀವಿತದಿಂದ ಸಾಬೀತುಪಡಸುತ್ತಾರೆ (ತೀತ 1:16).

*“ಸುಳ್ಳಾಡುವವರಾಗಿದ್ದಾರೆ”*– ಆ ರೀತಿಯ ಜನರು ಮೋಸಗೊಳಿಸಲ್ಪಟ್ಟಿದ್ದಾರೆ ಅಥವಾ ಬೇರೆಯವನ್ನು ಮೋಸಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಎರಡೂ ಸಂದರ್ಭಗಳಲ್ಲಿಯೂ ಅವರ ಹಕ್ಕು ಸಂಪೂರ್ಣವಾಗಿ ತಪ್ಪಾಗಿದೆ.

*“ಸತ್ಯವನ್ನನುಸರಿಸುವವರಲ್ಲ”*– ಸತ್ಯವನ್ನು ಸುಮ್ಮನೆ ಕೇಳಿಸಿಕೊಳ್ಳುವುದಾಗಲೀ ಅಥವಾ

ಸತ್ಯವನ್ನು ಅಭ್ಯಾಸಮಾಡುವುದಾಗಲೀ ಸಾಕಾಗುವುದಿಲ್ಲ. ಸತ್ಯವನ್ನು ನಾವು ನಮ್ಮ ಜೀವಿತದಲ್ಲಿ ಅನುಸರಿಸಬೇಕು. **7**

**1:7** ಬೆಳಕಿನಲ್ಲಿ ನಡೆಯುದು ಎಂದರೆ ಏನು? ಯೋಹಾನನು ಪತ್ರಿಕೆಯ ಉಳಿದ ಭಾಗದಲ್ಲಿ ಇದರ ಅರ್ಥವನ್ನು ತಿಳಿಸಿದ್ದಾನೆ. ಪಾಪದ ಕತ್ತಲೆಯಲ್ಲಿ, ಅಜ್ಞಾನ ಮತ್ತು ದುಷ್ಟತನದಲ್ಲಿ ನಡೆಯುವುದಕ್ಕೆ ಇದು ವಿರುದ್ಧವಾಗಿದೆ. ಇದರ ಅರ್ಥ ಪಾಪವನ್ನು ಮತ್ತು ದೇವರ ವಾಕ್ಯಕ್ಕೆ ವಿರೋಧವಾಗಿರುವುದನ್ನು ನಿರಾಕರಿಸುವುದು ಮತ್ತು ಆತನ ವಾಕ್ಯವು ನಮಗೆ ಏನು ಹೇಳುತ್ತದೋ ಅದನ್ನು ಅನುಸರಿಸುವುದಾಗಿದೆ. ದೇವರ ಕಡೆಗೆ ತೆರೆದ ಮನದಿಂದಿರುವುದು, ನಾವು ಏನು ಮಾಡಬೇಕೋ ಅವುಗಳಲ್ಲಿ ಯಾವುದನ್ನೂ ಮುಚ್ಚಿಡದಿರುವುದು. ನಾವು ಬೆಳಕಿನಲ್ಲಿ ನಡೆಯಬೇಕಾದರೆ ಮೊದಲು ನಮ್ಮಲ್ಲಿ ಬೆಳಕಿರಬೇಕು. ಅದರೊಳಗೆ ನಮ್ಮನ್ನು ತರಬೇಕಾಗಿರುವುದು ದೇವರ ಕೆಲಸವಾಗಿದೆ – 2 ಕೊರಿಂಥ 4:6; 1 ಪೇತ್ರ 2:9; ಕೊಲೊ 1:12-13. ಬೆಳಕಿನ ರಾಜ್ಯದಲ್ಲಿರುವವರು ಆ ರೀತಿಯಲ್ಲಿ ನಡೆದುಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ (2:6).

*"ಅನ್ಯೋನ್ಯತೆ"*– ವಿಶ್ವಾಸಿಗಳು ಬೆಳಕಿನಲ್ಲಿ ನಡೆದರೆ ಮಾತ್ರ ನಿಜವಾದ ಕ್ರೈಸ್ತ ಅನ್ಯೋನ್ಯತೆಯು ಇರುತ್ತದೆ. ಪಾಪ ಮತ್ತು ದೋಷದಲ್ಲಿ ನಡೆಯುವುದು ಅನ್ಯೋನ್ಯತೆಯನ್ನು ಸಾಯಿಸುತ್ತದೆ.

*"ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಮಾಡುತ್ತದೆ"*– ವಿಶ್ವಾಸಿಗಳು ಕೆಲವು ಸಾರಿ ಯೋಚನೆಯಲ್ಲಿ, ಮಾತಿನಲ್ಲಿ ಅಥವಾ ಕಾರ್ಯದಲ್ಲಿ ಪಾಪಮಾಡುವವರಾಗಿದ್ದಾರೆ (2:1; ಯಾಕೋಬ 3:2; ಗಲಾ 2:11-13; 5:17; ರೋಮಾ 7:18; 1 ಅರಸು 8:46). ಅವರು ಬೆಳಕಿನಲ್ಲಿ ನಡೆದರೆ ದೇವರು ಅವರ ಪಾಪಗಳನ್ನು ಕ್ಷಮಿಸುತ್ತಾನೆ, ಅವರನ್ನು ಪರಿಶುದ್ಧಗೊಳಿಸುವನು ಮತ್ತು ಅವು ಎಂದಿಗೂ ನಡೆದಿಲ್ಲವೆಂಬತೆ ಅದನ್ನು ದೂರಮಾಡುವನು. ಆತನು ಇದನ್ನು ಕ್ರಿಸ್ತನು ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಕೊಟ್ಟ ನಿಮಿತ್ತವಾಗಿ ಮಾಡುವನು (2:2). ಈ ಪ್ರಕ್ರೀಯೆಯು ನಿರಂತರವಾಗಿ ನಡೆದುಕೊಂಡೇ ಇರುತ್ತದೆ (ಗ್ರೀಕ್ ಭಾಷೆಯ ಕ್ರಿಯಾ ಪದವು ನಿರಂತರ ವರ್ತಮಾನ ಕಾಲದಲ್ಲಿದೆ – "ಪರಿಶುದ್ಧಗೊಳಿಸುತ್ತಲೇ ಇರುತ್ತದೆ"). **8**

**1:8** ಕ್ರಿಸ್ತನ ರಕ್ತವು ನಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸುವುದಾದದರೆ, ಅವರ ಅರ್ಥ ನಾವು ಪಾಪರಹಿತರೋ? ಇಲ್ಲವೇ ಇಲ್ಲ. ಹಾಗೆ ಯಾವನಾದರು ಯೋಚಿಸಬಾರದೆಂದು ಯೋಹಾನನು ಒಡನೆಯೇ ಈ ವಿಷಯವನ್ನು ಸ್ಪಷ್ಟ ಪಡಿಸುತ್ತಾನೆ. ಈ ಭೂಮಿಯ ಮೇಲಿರುವ ಯಾವ ಮನುಷ್ಯನೂ, ಯಾವ ವಿಶ್ವಾಸಿಯೂ, ಪರಿಶುದ್ಧರೂ ಸಹ ಪಾಪವಿಲ್ಲದವನಲ್ಲ. ಪೌಲನು, ಮಹಾ ಪರಿಶುದ್ಧತೆಯುಳ್ಳ ಅಪೋಸ್ತಲನು, ಅವನಲ್ಲಿ ಪಾಪವು ವಾಸಮಾಡಿರುವ ಬಗ್ಗೆ ಮಾತನಾಡಿದನು (ರೋಮಾ 7:17). ಮತ್ತಾಯ 7:11;

ರೋಮಾ 7:14-25; ಗಲಾ 5:16-17; 1 ತಿಮೊ 1:15; ಯಾಕೋಬ 3:2 ಸಹ ನೋಡಿರಿ. ಈ ಜೀವನದಲ್ಲಿ ನಾವು ಯಾರೂ ಸಹ ಪಾಪವನ್ನು ಒಪ್ಪಿಕೊಳ್ಳುವ ಮತ್ತು ಕ್ರಿಸ್ತನ ರಕ್ತದ ಮೂಲಕ ಪಾಪವು ತೊಳೆಯಲ್ಪಡುವ ಅಗತ್ಯವನ್ನು ಮೀರಲು ಸಾಧ್ಯವಿಲ್ಲ (ಮತ್ತಾಯ 6:12). ನಮ್ಮ ಸ್ವಭಾವವು ಪಾಪರಹಿತ ಸ್ವಭಾವವೆಂದು ನಮ್ಮಲ್ಲಿ ಯಾರಾದರು ಯೋಚಿಸುವುದಾದರೆ "ನಾವು ನಮ್ಮನ್ನು ಮೋಸಪಡಿಸಿಕೊಳ್ಳುತ್ತಿದ್ದೇವೆ" – ಅಂದರೆ, ನಾವು ತಪ್ಪುತ್ತಿದ್ದೇವೆ. ನಾವು ಯಾವುದನ್ನು ಸತ್ಯವೆಂಬುದಾಗಿ ಅನುಸರಿಸುತ್ತಿದ್ದೇವೋ ಅದು ಸತ್ಯವಲ್ಲ ಮತ್ತು ಇದನ್ನು ಮಾಡಲು ನಾವು ಜವಾಬ್ದಾರರಾಗಿರುತ್ತೇವೆ, ಮತ್ತು ತಪ್ಪನ್ನು ಅನುಸರಿಸುವುದರಲ್ಲಿ ತಪ್ಪಿತಸ್ಥರಾಗುತ್ತೇವೆ. ನಾವು ಪಾಪಿಗಳಲ್ಲವೆಂಬ ಯೋಚನೆಯು ನಮ್ಮ ಸ್ವಂತ ಪ್ರಯತ್ನದಿಂದ ಬರುವಂತದ್ದಾಗಿದೆ, ದೇವರ ವಾಕ್ಯದಿಂದಲ್ಲ.

*"ಸತ್ಯವೆಂಬುದು ನಮ್ಮಲ್ಲಿಲ್ಲ"*– ಬೇರೆ ಯಾವುದೇ ಸತ್ಯವು ನಮ್ಮಲ್ಲಿದ್ದರೂ, ಪಾಪದ ಮತ್ತು ಪಾಪದಿಂದ ಕ್ಷಮಿಸಲ್ಪಡುವ ಸತ್ಯವು ನಮ್ಮಲ್ಲಿಲ್ಲ. ಅಂತಹ ಸಂದರ್ಭದಲ್ಲಿ ನಾವು ಸತ್ಯವನ್ನು ಎದುರಿಸುತ್ತಿಲ್ಲ, ಆದರೆ ಅದರಿಂದ ತಪ್ಪಿಸಿಕೊಳ್ಳುತ್ತಿದ್ದೇವೆ, ಪಾಪವನ್ನು ಬೇರೆ ಹೆಸರುಗಳಿಂದ ಕರೆದುಕೊಳ್ಳುತ್ತಿದ್ದೇವೆ ಮತ್ತು ನೆಪವೊಡ್ಡುತ್ತಿದ್ದೇವೆ. ಈ ರೀತಿಯಲ್ಲಿ ಸುಳ್ಳುತನವು ಸತ್ಯದ ಸ್ಥಾನವನ್ನು ನಮ್ಮ ಹೃದಯಗಳಲ್ಲಿ ತೆಗೆದುಕೊಳ್ಳುತ್ತಿದೆ. ಪ್ರತಿಯೊಬ್ಬ ವಿಶ್ವಾಸಿಯು ಪರಿಶುದ್ಧತೆಯ ಜೀವಿತವನ್ನು ಜೀವಿಸುವ ಗುರಿಯನ್ನು ಹೊಂದಿರಬೇಕು, ಆದರೆ ಯಾರೂ ಸಹ ಅದನ್ನು ಸಾಧಿಸಲಾರರು – ಫಿಲಿಪ್ಪಿ 3:12. ವಿಶ್ವಾಸಿಗಳಾಗಿ ನಾವು ಯಾವ ಪಾಪವನ್ನೂ ಮಾಡದೆ ಜೀವಿಸಲು ಗುರಿ ಹೊಂದಿರಬೇಕು (2:1), ಆದರೆ ನಾವು ಇದನ್ನು ಸಹ ಸಾಧಿಸಲಾರೆವು. ನಾವು ತಿಳಿದು ಪಾಪಮಾಡದಿದ್ದರೆ, ತಿಳಿಯದೆ ಪಾಪ ಮಾಡುತ್ತೇವೆ ಮತ್ತು ತಿಳಿಯದೆ ಮಾಡಿದ ತಪ್ಪುಗಳು ಸಹ ಪಾಪವಾಗಿದೆ ಹೊರತು ಬೇರೇನೂ ಅಲ್ಲ (ಯಾಜಕ 4:1-2 ಹೋಲಿಸಿರಿ). ನಾವು ಬೇಕೆಂದು ಮಾಡುವುದರಲ್ಲಿ ನಾವು ಪಾಪಮಾಡದಿದ್ದರೆ, ನಾವು ಏನು ಮಾಡಬೇಕೋ ಅದನ್ನು ಮಾಡದಿರುವುದರಿಂದ ಪಾಪಮಾಡಿದವರಾಗಿದ್ದೇವೆ (ಸಂಖ್ಯಾ 32:23; ಮತ್ತು ಮತ್ತಾಯ 25:42-43 ಟಿಪ್ಪಣಿಯನ್ನು ನೋಡಿರಿ). ನಾವು ಏನು ಮಾಡಬೇಕೋ ಅದನ್ನು ತಪ್ಪಿಲ್ಲದೆ ಮಾಡಿದ್ದೇವೆಂದು ಯಾರು ತಾನೆ ಹೇಳಲು ಸಾಧ್ಯ? **9**

**1:9** *"ನಾವು"*– ಯೋಹಾನನು ವಿಶ್ವಾಸಿಗಳಿಗೆ ಬರೆಯುತ್ತಿದ್ದಾನೆ (2:1,12-14) ಮತ್ತು ಅವನು ಹೇಳುತ್ತಿರುವುದರಲ್ಲಿ ತನ್ನನ್ನೂ ಸೇರಿಸಿಕೊಂಡಿದ್ದಾನೆ. ಪ್ರತಿಯೊಬ್ಬ ವಿಶ್ವಾಸಿಯು ತಮ್ಮ ಪಾಪಗಳನ್ನು ಒಪ್ಪಿಕೊಳ್ಳಬೇಕಾದ ಅಗತ್ಯವಿದೆ ಎಂದು ಆತನಿಗೆ ತಿಳಿದದೆ – ಮತ್ತಾಯ 6:12; ಲೂಕ 11:4. "ಒಪ್ಪಿಕೊಂಡು" – ಗ್ರೀಕ್ ಭಾಷೆಯಲ್ಲಿ ಈ ಪದದ ಅರ್ಥ, ಬೇರೆ ವ್ಯಕ್ತಿ ಹೇಳಿದಂತೆಯೇ ಹೇಳುವುದು, ಒಪ್ಪಿಕೊಳ್ಳುವುದು, ಹೊರೆಸಿರುವ ಆರೋಪಗಳು ಸತ್ಯವೆಂದು ಒಪ್ಪಿಕೊಳ್ಳುವುದು, ಮುಂತಾದ ಅರ್ಥವನ್ನು ಕೊಡುತ್ತದೆ. ಪಾಪವನ್ನು ಅರಿಕೆಮಾಡುವುದು

ಎಂದರೆ ದೇವರು ಪಾಪದ ಬಗ್ಗೆ ಹೇಳುವುದನ್ನೇ ಹೇಳುವುದು. ನಾವು ಅದನ್ನು ಬೇರೆ ಹೆಸರಿಂದ ಕರೆಯಬಾರದು ಅಂದರೆ ತಪ್ಪುಗಳು ಅಥವಾ ತೀರ್ಪಿನ ದೋಷಗಳು ಮುಂತಾದ ಹೆಸರಿನಿಂದ. ದೇವರ ನೀತಿಗೆ ಮತ್ತು ಪರಿಶುದ್ಧತೆಗೆ ವಿರುದ್ಧವಾಗಿ ಯೋಚನೆಯಲ್ಲಿಯೂ, ಮಾತಿನಲ್ಲಿಯೂ ಅಥವಾ ಕಾರ್ಯದಲ್ಲಿಯೂ ಮಾಡುವುದು ಪಾಪವಾಗಿದೆ. ಮಾಡಬೇಕಾದುದನ್ನು ಮಾಡದೆ ಇರುವುದು ಸಹ ಪಾಪವಾಗಿದೆ (ಯಾಕೋಬ 4:17; ಮತ್ತಾಯ 25:41-46; 1 ಸಮು 12:23). ಪಾಪ ಮಾಡುವುದರಿಂದ ಅದು ನಮ್ಮನ್ನು ದೋಷಿಗಳನ್ನಾಗಿ ಮಾಡುತ್ತದೆ ಮತ್ತು ನಮಗೆ ಕ್ಷಮಾಪಣೆಯ ಅಗತ್ಯವಿದೆ. ಆದ್ದರಿಂದ ನಾವು ದೇವರೊಂದಿಗೆ ಒಪ್ಪಿಕೊಳ್ಳಬೇಕು, ನಮ್ಮ ಪಾಪಗಳನ್ನು ಅವುಗಳ ಹೆಸರಿನಿಂದ ಕರೆಯಿರಿ ಮತ್ತು ಅವುಗಳಿಗಾಗಿ ದೇವರಿಂದ ಕ್ಷಮಾಪಣೆ ಕೇಳಿರಿ. ನಮ್ಮ ಪಾಪಗಳನ್ನು ಅರಿಕೆಮಾಡುವುದು ಮತ್ತು ಬೆಳಕಿನಲ್ಲಿ ನಡೆಯುವುದು ಒಟ್ಟಾಗಿ ಹೋಗುತ್ತದೆ. ದೇವರ ಬೆಳಕು ನಮ್ಮ ಪಾಪವನ್ನು ಬಹಿರಂಗ ಪಡಿಸುತ್ತದೆ (ಎಫೆ 5:13-14), ಮತ್ತು ಅವು ಬಹಿರಂಗವಾದಾಗ ಅವುಗಳನ್ನು ಒಪ್ಪಿಕೊಳ್ಳಬೇಕು ಮತ್ತು ಅವುಗಳನ್ನು ಬಿಟ್ಟುಬಿಡಬೇಕು. ಹೌದು ನಮ್ಮ ಅರಿಕೆಯು ದೇವರ ಮುಂದೆಯಾಗಿರಬೇಕು ಯಾಕಂದರೆ ಆತನೇ ನಮ್ಮನ್ನು ಕ್ಷಮಿಸುವಾತನಾಗಿದ್ದಾನೆ.

*"ನಂಬಿಗಸ್ತನು"*– ಕೀರ್ತನೆ 33:4; 111:7-8; 145:13; 146:6; 1 ಕೊರಿಂಥ 1:9; 2 ತಿಮೊ 2:13; ಇಬ್ರಿ 10:23; 11:11; 1 ಪೇತ್ರ 4:19. ದೇವರು ತನ್ನ ವಾಕ್ಯಕ್ಕೆ, ತನ್ನ ಜನರನ್ನು ರಕ್ಷಿಸಲು, ಮತ್ತು ತನ್ನ ಸ್ವಂತ ಸ್ವಭಾವಕ್ಕೆ ಯಾವಾಗಲೂ ನಂಬಿಗಸ್ತನಾಗಿದ್ದಾನೆ – ವಿಮೋ 34:7; ಸಂಖ್ಯಾ 14:18; ನೆಹೆ 9:17; ಕೀರ್ತನೆ 86:5; 99:8; 103:3; ದಾನಿ 9:9; ಮೀಕ 7:18; ಮತ್ತಾಯ 6:12; 9:2; ರೋಮಾ 4:7-8; ಇಬ್ರಿ 8:12; ಯಾಕೋಬ 5:15. ಆತನ ವಾಕ್ಯ (ಸತ್ಯವೇದ) ತನ್ನ ಜನರ ಪಾಪಗಳನ್ನು ಕ್ಷಮಿಸಲು ತನ್ನ ಸ್ವಂತ ಮಗನು ಪಾಪಗಳಿಗಾಗಿ ಪ್ರಾಯಶ್ಚಿತ್ತವಾಗಿ ಮರಣಿಸಲು ಅವರಿಗಾಗಿ ಕಳುಹಿಸಿದನು ಎಂದು ಹೇಳುತ್ತದೆ – ಯೋಹಾನ 1:29; 3:14-16. ಆದ್ದರಿಂದ ನಾವು ಪಶ್ಚಾತ್ತಾಪ ಪಟ್ಟು ನಿಜವಾಗಿಯೂ ಕ್ಷಮೆ ಮತ್ತು ಶುದ್ಧೀಕರಣವನ್ನು ಬಯಸಿದರೆ ಆತನು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ ಎಂದು ನಾವು ಖಚಿತವಾಗಿ ಹೇಳಬಹುದು.

*"ನೀತಿವಂತನೂ"*– ಧರ್ಮೋ 32:4; ಕೀರ್ತನೆ 9:16; 36:6; 89:14; 111:7. ಆತನು ತನ್ನ ನೀತಿಗನುಸಾರವಾಗಿ ಆತನು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ. ನಮ್ಮ ಪಾಪಗಳಿಗಾಗಿ ಆತನು ಬೆಲೆ ಕಟ್ಟಿದ್ದಾನೆ, ಅವರಿಗಾಗಿ ಪ್ರಾಯಶ್ಚಿತ್ತವಾದನು. ಆದ್ದರಿಂದ ನಾವು ಪಶ್ಚಾತ್ತಾಪ ಪಟ್ಟು ಒಪ್ಪಿಕೊಳ್ಳವುಳ್ಳುವುದಾದರೆ ದೇವರು ತನ್ನ ನೀತಿಯಿಂದ ನಮ್ಮನ್ನು ಕ್ಷಮಿಸುತ್ತಾನೆ. 2:2; ರೋಮಾ 3:25-26.

*"ಶುದ್ಧಮಾಡುವನು"*– ವ. 7. ದೇವರು ನಮ್ಮ ಪಾಪಗಳನ್ನು ಕ್ಷಮಿಸುವನು, ಅವುಗಳನ್ನು

ನಿರಂತರವಾಗಿ ದೂರಮಾಡುವನು ಮತ್ತು ನಮ್ಮ ಮನಸ್ಸಾಕ್ಷಿಯನ್ನು ಎಲ್ಲಾ ಅನೀತಿಯಿಂದ ಶುದ್ಧಮಾಡುವನು (ಇಬ್ರಿ 9:14). **10**

**1:10** 8ನೇ ವಚನವು ವರ್ತನಮಾತ ಕಾಲದ ಬಗ್ಗೆ ಮಾತಾಡುತ್ತದೆ; ಈ ವಚನವು ಭೂತಕಾಲದ ಬಗ್ಗೆ ಮಾತಾಡುತ್ತದೆ. ದೇವರು ಹೇಳುತ್ತಾನೆ "ಎಲ್ಲರೂ ಪಾಪಮಾಡಿದ್ದಾರೆ" (ರೋಮಾ 3:9-23). ನಾವು ಮಾಡಿಲ್ಲವೆಂದು ನಾವು ಹೇಳುವುದಾದರೆ, ದೇವರ ವಾಕ್ಯವು ಸತ್ಯವಲ್ಲವೆಂದು, ಸತ್ಯವೇದದ ದೇವರು ಸುಳ್ಳುಗಾರನೆಂದು ನಾವು ಹೇಳುತ್ತಿದ್ದೇವೆ. ಅಂತಹ ಸಂದರ್ಭದಲ್ಲಿ, ಸತ್ಯವೇದದ ಯಾವುದೇ ಭಾಗಕ್ಕೆ ನಮ್ಮಲ್ಲಿ ನಿಜವಾದ ಸ್ಥಳವಿಲ್ಲ.

# 2[1]

**2:1** *"ಪ್ರೀಯರಾದ ಮಕ್ಕಳೇ"*– ಆತನು ಅವರನ್ನು ತನ್ನ ಆತ್ಮೀಕ ಮಕ್ಕಳೆಂದು ಭಾವಿಸುತ್ತಾನೆ. 1 ತಿಮೊ 1:2 ಹೋಲಿಸಿರಿ.

*"ನೀವು ಪಾಪಮಾಡದಂತೆ"*– ನಮ್ಮ ಗುರಿ ಇದಾಗಿರಬೇಕು, ಇದು ನಿಜವಾದದ್ದು. ಮತ್ತು ಈ ಪದವು ಎಲ್ಲಾ ವಿಶ್ವಾಸಿಗಳು ಮಾಡಲು ಸಾಧ್ಯವಾದದನ್ನು ತೆರೆಯುತ್ತದೆ. ನಮ್ಮಲ್ಲಿ ಪಾಪದ ಸ್ವಭಾವವಿದ್ದರೂ ಸಹ (1:8), ದೇವರ ಕೃಪೆಯಿಂದ ಮತ್ತು ಪವಿತ್ರಾತ್ಮನ ಶಕ್ತಿಯಿಂದ ನಾವು ಮೇಲ್ಗೊಳ್ಳಬಹುದು. ನಾವು ಶೋಧನೆಗಳಿಂದ ಮೇಲ್ಗೊಂಡು ತಿಳಿದು ಪಾಪಮಾಡಬೇಕಾಗಿರುವುದಿಲ್ಲ. 1 ಕೊರಿಂಥ 10:13; 2 ಕೊರಿಂಥ 7:1 ಹೋಲಿಸಿರಿ. ಪಾಪ ಸ್ವಭಾವವಿದೆ ಎಂದು ಕ್ರಿಸ್ತನಲ್ಲಿರುವ ವಿಶ್ವಾಸಿಯು ಪಾಪಮಾಡಬೇಕೆಂದಲ್ಲ, ಮತ್ತು ಪಾಪ ಮಾಡಲು ಇದು ನೆಪವಾಗಿರಬಾರದು, ಯಾಕಂದರೆ ದೇವರ ಮೂಲಕ ಅವರಲ್ಲಿ ಹೊಸ ಸೃಷ್ಟಿಯ ನೀತಿ ಮತ್ತು ಪರಿಶುದ್ಧತೆಯು ಅವರಲ್ಲಿರುತ್ತದೆ (ಎಫೆ 4:24) ಮತ್ತು ದೇವರ ಆತ್ಮನು ಅವರಲ್ಲಿ ಜೀವಿಸುತ್ತಾನೆ (1 ಕೊರಿಂಥ 6:19).

*"ಸಹಾಯಕನು ನಮಗಿದ್ದಾನೆ"*– ರೋಮಾ 8:34; 1 ತಿಮೊ 2:5; ಇಬ್ರಿ 7:25; ರೋಮಾ 5:9-10. ಯೇಸು ಪರಲೋಕದ ನಮ್ಮ ಸಹಾಯಕನಾಗಿದ್ದಾನೆ, ನಮಗಾಗಿ ವಾದ ಮಾಡುವ ವಕೀಲನಾಗಿದ್ದಾನೆ, ವಿಶ್ವಾಸಿಗಳು ಪಾಪಮಾಡಿದಾಗ ಅವರ ಪರವಾಗಿ ತಂದೆಯೊಂದಿಗೆ ಮಾತಾಡುವವನಾಗಿದ್ದಾನೆ. ಸೈತಾನನು ನಮ್ಮನ್ನು ದೂಷಿಸುತ್ತಾನೆ (ಪ್ರಕ 12:10), ಕ್ರಿಸ್ತನು ನಮ್ಮನ್ನು ಕಾಪಾಡುವವನಾಗಿದ್ದಾನೆ. ಒಬ್ಬ ವಿಶ್ವಾಸಿಯು ಪಾಪಮಾಡಿದರೆ, ಅವನು ನಾಶವಾಗುತ್ತಾನೋ? ಅವನು ತನ್ನ ರಕ್ಷಣೆಯನ್ನು ಕಳೆದುಕೊಳ್ಳುತ್ತಾನೋ? ಅವನಿಗೆ ನಿರೀಕ್ಷೆಯಿಲ್ಲವೋ? ಅದು ಸತ್ಯವೇದದ ಬೋಧನೆಯಲ್ಲ – 1:9. ಅವರಿಗಾಗಿ ಸಹಾಯಕ ಮತ್ತು ಕಾಪಾಡುವವನು ಇರುವಾಗ ಹೇಗೆ ಅವರ ರಕ್ಷಣೆಯು ನಾಶವಾಗುತ್ತದೆ? ಆತನು ನಮ್ಮನ್ನು ಪ್ರತಿನಿಧಿಸುವ ಮತ್ತು ಕಾಪಾಡುವ ನೀತಿಯುಳ್ಳ ವಕೀಲಾಗಿದ್ದಾನೆ, ಅವನು ನಮ್ಮನ್ನು ಅಳತೆಯಿಲ್ಲದ ಪ್ರೀತಿಯಿಂದ ಪ್ರೀತಿಸುವವನು, ಎಲ್ಲಾ ಪಾಪಗಳ ದಂಡನೆಯಿಂದ

ನಮ್ಮನ್ನು ಬಿಡುಗಡೆಮಾಡಬೇಕೆಂದು ತೀರ್ಮಾನಿದ್ದಾನೆ, ನಮ್ಮ ವಿರುದ್ಧವಾಗಿರುವ ಎಲ್ಲಾ ಪಾಪಗಳ ದೇವರ ಕೋಪದಿಂದ ಪಾರುಮಾಡುವನು. ಆತನು ಸಫಲನಾಗುತ್ತಾನೆಂದು ನಾವು ಅನುಮಾನಿಸಬಹುದೇ?

*"ನೀತಿವಂತನಾದ"*– ಅಪೊ 3:14; 7:52; 22:14. ಪರಿಪೂರ್ಣ ನ್ಯಾಯನಿರ್ಣಯ ಮತ್ತು ಆತನು ನಮ್ಮ ವಕೀಲನಾಗಿ, ಮಧ್ಯವರ್ತಿಯಾಗಿ ಮತ್ತು ನಮ್ಮನ್ನು ಕಾಪಾಡುವವನಾಗಿ ನಮ್ಮೊಂದಿಗಿನ ಆತನ ವ್ಯವಹಾರದಲ್ಲಿ ನೀತಿಗೆ ವಿರುದ್ಧವಾಗಿ ಏನೂ ಮಾಡುವುದಿಲ್ಲ. ವಿಶ್ವಾಸಿಗಳು ಪಾಪಮಾಡಿದಾಗ ಆತನು ಅವರನ್ನು ನೀತಿಯಿಂದ ಕಾಪಾಡುತ್ತಾನೆ ಯಾಕಂದರೆ ಆತನು ತನ್ನನ್ನು ತ್ಯಾಗವಾಗಿ ಅರ್ಪಿಸುವುದರ ಮೂಲಕ ಅವರ ಪಾಪಗಳನ್ನು ತೆಗೆದುಹಾಕಿದ್ದಾನೆ. **2**

**2:2** *"ನಿವಾರಣೆ ಮಾಡುವ ಯಜ್ಞವಾಗಿದ್ದಾನೆ"*– ಪಾಪವನ್ನು ತೆಗೆದು ಹಾಕುವುದ ಮೂಲಕ, ದೇವರ ಕೋಪವನ್ನು ತಡೆಯುವವನು ಕ್ರಿಸ್ತನಾಗಿದ್ದಾನೆ. ಸತ್ಯವೇದದಲ್ಲಿ ಉಪಯೋಗಿಸಿರುವ ಪದದ ಅರ್ಥವು ಇದಾಗಿದೆ. ರೋಮಾ 3:25; ಇಬ್ರಿ 2:17 ನೋಡಿರಿ. ಮತ್ತಾಯ 26:28; ಯೋಹಾನ 3:14-15; 1 ಕೊರಿಂಥ 15:3; 2 ಕೊರಿಂಥ 5:19,21; ಗಲಾ 1:4; ಎಫೆ 1:7; ಇಬ್ರಿ 9:12,28; 1 ಪೇತ್ರ 2:24; 3:18.

*"ಸಮಸ್ತ ಲೋಕದ ಪಾಪಗಳನ್ನು"*– 4:14; ಯೋಹಾನ 1:29; 2 ಕೊರಿಂಥ 5:14; 1 ತಿಮೊ 2:6; ಇಬ್ರಿ 2:9. ಕ್ರಿಸ್ತನು ಯಜ್ಞವಾಗಿ ತಮಗಾಗಿ ಮರಣಸದಿರುವುದರಿಂದ ಜನರು ಕಳೆದು ಹೋಗಿಲ್ಲ. ಅವರು ಆ ಯಜ್ಞವನ್ನು ಸ್ವೀಕರಿಸದಿರುವುದರಿಂದ ಮತ್ತು ಆತನನ್ನು ನಂಬದಿರುವುದರಿಂದ ಅವರು ಕಳೆದುಹೋಗಿದ್ದಾರೆ. ಅವರು ಬೆಳಕಿನ ಬದಲು ಕತ್ತಲೆಯನ್ನು, ಪರಿಶುದ್ಧತೆಗೆ ಬದಲಾಗಿ ಪಾಪವನ್ನು ಆರಿಸಿಕೊಂಡರು. ಇದು ಅವರ ಖಂಡನೆಯಾಗಿದೆ. **3**

**2:3** *"ತಿಳುಕೊಳ್ಳುತ್ತೇವೆ"*– ವ.5; 3:14,19,24; 4:13; 5:13. ಇಲ್ಲಿ ಯೋಹಾನನು ದೇವರನ್ನು ತಿಳುಕೊಳ್ಳುವ ಬಗ್ಗೆ ಮಾತಾಡುತ್ತಿಲ್ಲ, ಆದರೆ ಆತನನ್ನು ವಯಕ್ತಿಕವಾಗಿ ತಿಳುಕೊಳ್ಳುವ ಬಗ್ಗೆ. "ತಿಳುಕೊಳ್ಳುವುದು" –ಈ ಪದವು ಈ ಪತ್ರಿಕೆಯಲ್ಲಿ ಬಹಳ ಮುಖ್ಯವಾದದ್ದಾಗಿದೆ. ಇದು 33 ಸಾರಿ ಕಾಣಿಸಿಕೊಳ್ಳುತ್ತದೆ (ಹೊಸ ಒಡಂಬಡಿಕೆಯ ಬೇರೆ ಪತ್ರಿಕೆಗಳಿಗಳಲ್ಲಿ ಕಾಣಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ). ಈ ಪತ್ರಿಕೆಯಲ್ಲಿ ಯೋಹಾನನು ಸಾಕ್ಷ್ಯವನ್ನು ಆಧರಿಸಿದ ಜ್ಞಾನದ ಬಗ್ಗೆ ಮಾತನಾಡುತ್ತಾನೆ. ದೇವರನ್ನು ತಿಳಿಯದಿದ್ದರೂ ಜನರು ದೇವರನ್ನು ತಿಳುಕೊಂಡಿದ್ದೇವೆಂದುಕೊಳ್ಳುತ್ತಾರೆ. ಅವರು ಕೆಲವು ಭಾವಾತ್ಮಕ ಮತ್ತು ಅತೀಂದ್ರಿಯ ಅನುಭವಗಳಿಂದ ಮೋಸಹೋಗುತ್ತಾರೆ. ಜನರನ್ನು ಮಾರ್ಗತಪ್ಪಿಸುವ ಶಕ್ತಿಯುತವಾದ ಮೋಸಗೊಳಿಸುವ ಶಕ್ತಿಗಳು ಲೋಕದಲ್ಲಿವೆ – ಯೆರೆ 17:9; ಇಬ್ರಿ 3:13; ಪ್ರಕ 12:9. ನಾವು ಜೀವಿಸುವ ರೀತಿಯಲ್ಲಿ ಈ ಜ್ಞಾನವಿಲ್ಲದೆ ನಾವು ದೇವರನ್ನು ತಿಳಿದಿದ್ದೇವೆಂದು ನಾವು ಯೋಚಿಸಬಾರದು ಎಂದು ಯೋಹಾನನು ಒತ್ತಾಯಿಸುತ್ತಾನೆ.

ನಿಜವಾದ ದೇವರ ಜ್ಞಾನವು ಜನರ ಮೇಲೆ ಆಳವಾದ ಪರಿಣಾಮವನ್ನು ಬೀರುತ್ತದೆ (ಯೋಹಾನ 17:3). ಅದು ಅವರ ಹೃದಯಗಳನ್ನು, ಅವರ ಯೋಚನೆ, ಅವರ ನಡತೆಯನ್ನು ಬದಲಾಯಿಸುತ್ತದೆ. ಬದಲಾವಣೆಯಿಲ್ಲದಿದ್ದರೆ, ದೇವರ ನಿಜವಾದ ಜ್ಞಾನವು ಇಲ್ಲವೆಂದು ನಾವು ಖಚಿತವಾಗಿರಬಹುದು. ಜ್ಞಾನೋದಯವಾಯಿತೆಂದು ಕೆಲವರು ಹೇಳಿಕೊಳ್ಳುತ್ತಾರೆ, ದೇವರ ಬಗ್ಗೆ ಅಂತಿಮ ಸತ್ಯವನ್ನು ತಿಳಿಯುವುದು ಮತ್ತು ಆತನೊಂದಿಗೆ ಸಂಪೂರ್ಣವಾಗಿ ಒಂದಾಗಿರುವುದು. ಅಂದರೆ, ಅವರು ಯೇಸು ಕ್ರಿಸ್ತನ ಅಪ್ಪಣೆಗಳನ್ನು ಅನುಸರಿಸುತ್ತಾರೋ? ಇಲ್ಲದಿದ್ದರೆ, ಅವರ ಜ್ಞಾನ ಮತ್ತು ಅನುಭವವು ಮೋಸಕರವಾದದ್ದು ಮತ್ತು ನಿಷ್ಪ್ರಯೋಜನವಾಗಿದೆ. ದೇವರನ್ನು ನಾವು ತಿಳಿದಿದ್ದೇವೆಂದು ಹೇಳುವುದಕ್ಕೆ ಸಾಕ್ಷಿ ಏನಿದೆ? ವಿಧೇಯತೆ (ವ.3) ಹೃದಯದಲ್ಲಿ ದೇವರ ಪ್ರೀತಿ (ವ.5) ಯೇಸುವು ನಮಗೆ ಕೊಟ್ಟಿರುವ ಜೀವಿತದ ಮಾದರಿಯನ್ನು ಹಿಂಬಾಲಿಸುವುದು.

*"ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದು"*– 3:24; 5:3; ಮತ್ತಾಯ 28:20; ಯೋಹಾನ 14:15,23; ಅಪೊ 4:19; 5:29; ರೋಮಾ 6:16; 16:26; ಇಬ್ರಿ 5:9. ನಿಜವಾದ ವಿಶ್ವಾಸಿಗಳು ಯೇಸುವನ್ನು ಕರ್ತನೂ ರಕ್ಷಕನೆಂದು ಸ್ವೀಕರಿಸುತ್ತಾರೆ (ಟಿಪ್ಪಣಿ ಅಪೊ 22:10). **4**

**2:4** *"ಸುಳ್ಳುಗಾರನು"*– ವ. 8; 4:20; ಯೋಹಾನ 8:44.

*"ಆತನಲ್ಲಿ"*– ಯೋಹಾನ 17:21-23; ರೋಮಾ 6:3-8; 1 ಕೊರಿಂಥ 12:13; ಎಫೆ 1:1,3. **5**

**2:5** *"ಪ್ರೀತಿ"*– ಈ ಪತ್ರಿಕೆಯಲ್ಲಿ ಇರುವ ಇನ್ನೊಂದು ಮುಖ್ಯವಾದ ಪದ. ಇದು 35 ಸಾರಿ ಕಾಣಿಸಿಕೊಳ್ಳುತ್ತದೆ (ಹೊಸ ಒಡಂಬಡಿಕೆಯ ಬೇರೆ ಪುಸ್ತಕಕ್ಕಿಂತಲೂ ಹೆಚ್ಚಾಗಿ). ದೇವರಿಗೆ ವಿಧೇಯರಾಗುವುದು ಆತನನ್ನು ಪ್ರೀತಿಸುವ ನಿಜವಾದ ಸಾಕ್ಷಿಯಾಗಿದೆ. ಬೇರೆ ಎಲ್ಲವೂ ಕೇವಲ ಭಾವನೆ ಮತ್ತು ವಂಚನೆಯಾಗಿದೆ (ಯೋಹಾನ 14:15). ಹೃದಯದಲ್ಲಿ ಬೇರೂರಿರುವ ಸತ್ಯವು ಪ್ರೀತಿಯಲ್ಲಿಯೂ ಮತ್ತು ವಿಧೇಯತೆಯಲ್ಲಿಯೂ ಫಲಕೊಡುತ್ತದೆ. **6**

**2:6** *"ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ"*– 1 ಪೇತ್ರ 2:21; ನೋಡಿರಿ; ಎಫೆ 5:1; 1 ಥೆಸ 1:6. **7**

**2:7** *"ನೀವು ಕೇಳಿದ ವಾಕ್ಯವೇ"*– 1:1-3. ಕ್ರಿಸ್ತನು ಯಾರು ಎಂಬುದೇ ಸಂದೇಶವಾಗಿದೆ, ಆತನು ಏನಾಗಿದ್ದಾನೆ ಮತ್ತು ನಾವು ಏನಾಗಬೇಕೆಂದು ಮತ್ತು ಮಾಡಬೇಕೆಂದು ಆತನು ಇಚ್ಛಿಸುತ್ತಾನೆ. 3:23 ನೋಡಿರಿ. ಯೋಹಾನನು ತಾನು ಕಂಡುಹಿಡಿದ ವಿಚಿತ್ರವಾದ ಹೊಸ ಕಾರ್ಯವನ್ನು ಬರೆಯುತ್ತಿಲ್ಲ (2 ಪೇತ್ರ 1:16 ಹೋಲಿಸಿರಿ). **8**

**2:8** *"ಹೊಸ"*– ಹಳೆಯ ಆಜ್ಞೆಗಳಂತೆಯೇ ಆದರೆ ಒತ್ತು ನೀಡಿ ಹೊಸ ರೀತಿಯಲ್ಲಿ ಕೊಡಲ್ಪಟ್ಟಿದೆ.

“*ಈಗ ಪ್ರಕಾಶಿಸುತ್ತದೆ*”– ಕ್ರಿಸ್ತನು ಈ ಲೋಕಕ್ಕೆ ಬರುವ ಮುಂಚೆ ಎಲ್ಲೆಡೆಯಲ್ಲಿಯೂ ಆತ್ಮಿಕ ಕತ್ತಲೆಯು ಆವರಿಸಿತ್ತು (ಯೆಶಾಯ 60:2). ಆತನು ಬೆಳಕಾಗಿ ಬಂದನು (ಯೋಹಾನ 8:12), ತನ್ನ ಶಿಷ್ಯರನ್ನು ಬೆಳಕುಗಳಾಗಿ ಕಳುಹಿಸಿದನು (ಮತ್ತಾಯ 5:14), ಮತ್ತು ಆತನ ಸುವಾರ್ತೆಯ ಮೂಲಕ ಜನರಿಗೆ ಬೆಳಕನ್ನು ಕೊಡುತ್ತಾನೆ. ಈ ಬೆಳಕು ಇಸ್ರಾಯೇಲ್ ದೇಶದಲ್ಲಿ ಪ್ರಕಾಶಿಸಲು ಪ್ರಾರಂಬಿಸಿತು ಆದರೆ ಯೋಹಾನನ ಕಾಲದಲ್ಲಿ ಬಹು ಬೇಗನೆ ರೋಮ್ ಸಾಮ್ರಾಜ್ಯದೆಲ್ಲೆಡೆಯಲ್ಲಿಯೂ ಹರಡಿತು. ಈಗ ಅದು ಲೋಕದ ಪ್ರತಿಯೊಂದು ದೇಶದಲ್ಲಿಯೂ ಪ್ರಕಾಶಿಸುತ್ತಿದೆ. **9-11**

**2:9-11** ನಾವು ಬೆಳಕಿನಲ್ಲದ್ದೇವೋ ಅಥವಾ ಕತ್ತಲೆಯಲ್ಲಿದ್ದೇವೋ ಎಂಬುದಕ್ಕೆ ಪ್ರೀತಿಯು ಪರೀಕ್ಷೆಯಾಗಿದೆ. ಬೆಳಕಿನಲ್ಲಿರುವುದರ ಮತ್ತು ಜ್ಞಾನೋದಯದ ಕುರಿತು ಜನರು ಏನು ಬೇಕಾದರೂ ಯೋಚಿಸಬಹುದು ಮತ್ತು ಎಲ್ಲಾ ರೀತಿಯ ಕಾರ್ಯಗಳನ್ನು ಹೇಳಬಹುದು, ಮತ್ತು ತಮ್ಮನ್ನು ಮತ್ತು ಇತರರನ್ನು ಮೋಸಪಡಿಸಬಹುದು. ಆದರೆ ಅವರ ನಡತೆಯಿಂದ ಅವರು ಏನಾಗಿದ್ದಾರೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಪ್ರೀತಿ ಮತ್ತು ಬೆಳಕು ಒಟ್ಟಾಗಿ ಹೋಗುತ್ತದೆ; ದ್ವೇಶ ಮತ್ತು ಕತ್ತಲೆಯು ಒಟ್ಟಾಗಿ ಹೋಗುತ್ತದೆ. **9**

**2:9** “*ಸಹೋದರ*”– ಒಂದು ವೇಳೆ ಇದು ಬೇರೆ ಕ್ರೈಸ್ತ ಸಹೋದರನಾಗಿರಬಹುದು, ಆದರೆ ಕ್ರೈಸ್ತರಲ್ಲದವರನ್ನು ದ್ವೇಶಿಸುವುದು ಸರಿ ಎಂಬುದಾಗಿ ಯೋಹಾನನು ಸಲಹೆಕೊಡುತ್ತಿಲ್ಲ. ಮತ್ತಾಯ 5:44 ನೋಡಿರಿ. ನಮ್ಮೊಳಗೆ ದೇವರ ಪ್ರೀತಿ ಇದ್ದರೆ ನಾವು ಎಲ್ಲರನ್ನೂ ಪ್ರೀತಿಸುತ್ತೇವೆ, ಜೊತೆ ವಿಶ್ವಾಸಿಗಳ ಮೇಲೆ ವಿಶೇಷ ಪ್ರೀತಿ ಇದ್ದರೂ ಸಹ. **10**

**2:10** “*ವಿಘ್ನಕರವಾದದ್ದು ಏನೂ ಇಲ್ಲ*”– ಇದರ ಅರ್ಥ ಇತರರನ್ನು ಎಡವಿ ಬೀಳುವಂತೆ ಮಾಡಲು ಅವನಲ್ಲಿ ಏನೂ ಇಲ್ಲ. ನಮ್ಮಲ್ಲಿರುವ ದೇವರ ಪ್ರೀತಿಯು ಆತ್ಮೀಕವಾಗಿ ಬೇರೆಯವರು ಎಡವಿ ಬೀಳಲು ಯಾವ ಕಾರಣವೂ ಇಲ್ಲದ ಜನರನ್ನಾಗಿ ನಮ್ಮನ್ನು ಮಾಡುತ್ತದೆ. ಅನೇಕ ಜನರು ಗಮನಾರ್ಹವಾಗಿ ಎಡವಿ ಬೀಳಲು ಕ್ರೈಸ್ತರಲ್ಲಿ ಪ್ರೀತಿಯ ಕೊರತೆಯೇ ಕಾರಣವಾಗಿದೆ. ಎಡವಿ ಬೀಳುವುದರ ಬಗ್ಗೆ ರೋಮಾ 14:13; 1 ಕೊರಿಂಥ 8:9; 10:32; 2 ಕೊರಿಂಥ 6:3 ನೋಡಿರಿ. **11**

**2:11** “*ತಾನು ಎಲ್ಲಿಗೆ ಹೋಗುತ್ತಾನೋ*”– ಯೋಹಾನ 12:35; ಜ್ಞಾನೋ 4:19.

“*ಕಣ್ಣುಗಳು ಕಾಣದ ಹಾಗೆ*”– 2 ಕೊರಿಂಥ 4:4 ಹೋಲಿಸಿರಿ. **12**

**2:12** “*ಕ್ಷಮಿಸಲ್ಪಟ್ಟಿರುವುದರಿಂದ*”– 1:7-9.

“*ಕ್ರಿಸ್ತನ ಹೆಸರಿನ ನಿಮಿತ್ತ*”– ಕ್ರಿಸ್ತನು ಯಾರಾಗಿದ್ದಾನೋ ಮತ್ತು ನಮಗಾಗಿ ಆತನು ಮಾಡಿದ ಕಾರ್ಯದಿಂದಾಗಿ, ಮತ್ತು ನಾವು ಆತನ ವಿಷಯವಾಗಿ ದೇವರ ಪ್ರಕಟನೆಯನ್ನು ನಂಬಿ ಮತ್ತು ಅದನ್ನು ಸ್ವೀಕರಿಸಿದ್ದರಿಂದ, ಮತ್ತು ಯಾಕಂದರೆ ಆತನು ನಮ್ಮನ್ನು ಕ್ಷಮಿಸಲು ಬಯಸುವುದರಿಂದ ನಾವು ಕ್ಷಮಿಸಲ್ಪಟ್ಟಿದ್ದೇವೆ. **13**

**2:13** *"ಬಲ್ಲವರಾಗಿರುವುದರಿಂದ"*– ವ. 3; ಯೋಹಾನ 17:3; 2 ಕೊರಿಂಥ 4:6; ಮತ್ತಾಯ 11:27.

*"ಆದಿಯಿಂದಿರುವಾತನು"*– 1:1 – ಅವನು ಕ್ರಿಸ್ತನನ್ನು ಸೂಚಿಸುತ್ತಿದ್ದಾನೆ.

*"ಜಯಿಸಿರುವದರಿಂದ"*– 4:4; 5:4; ಪ್ರಕ 2:7; 12:11; 21:7 ನೋಡಿರಿ. ಸೈತಾನನು ದುಷ್ಟನಾಗಿದ್ದಾನೆ. ಪಶ್ಚಾತ್ತಾಪ ಪಟ್ಟು, ಕ್ರಿಸ್ತನ ಮೇಲೆ ನಂಬಿಕೆ ಇಟ್ಟಾಗ ಮತ್ತು ನಿಜವಾದ ಕ್ರೈಸ್ತ ಜೀವಿತವನ್ನು ಜೀವಿಸುವಾಗ ಜನರು ಅವನನ್ನು "ಜಯಿಸುತ್ತಾರೆ".

*"ತಂದೆಗಳೇ"*– ವ. 1; ಮತ್ತಾಯ 5:16 (ಟಿಪ್ಪಣಿ). **14**

**2:14** *"ಶಕ್ತರು"*– ಅವರಿಗೆ ಯೌವನಸ್ಥರ ಶಕ್ತಿ ಮತ್ತು ಅದಕ್ಕಿಂತಲೂ ಮುಖ್ಯವಾಗಿ, ಸೈತಾನನ್ನು ಜಯಿಸಲು ದೇವರು ಅವರಿಗೆ ಕೊಟ್ಟ ಆತ್ಮೀಕ ಶಕ್ತಿ ಅವರಲ್ಲಿತ್ತು.

*"ದೇವರ ವಾಕ್ಯವು ನಿಮ್ಮಲ್ಲಿ ನೆಗೊಂಡಿರುವುದರಿಂದ"*– ವಚನಗಳು 24,27; ಯೋಹಾನ 15:7; ಕೀರ್ತನೆ 119:11; ಕೊಲೊ 3:16. **15**

**2:15** ಯೋಹಾನನು ಈಗ ಎಲ್ಲರಲ್ಲಿಯೂ ವಿನಂತಿಸಿಕೊಳ್ಳುತ್ತಾನೆ ಮತ್ತು ಎಲ್ಲರಿಗೂ ಅಪ್ಪಣೆಯನ್ನು ಕೊಡುತ್ತಾನೆ.

*"ಲೋಕ"*– 3:1,13; 4:5; 5:19. ಈ ಪತ್ರಿಕೆಯಲ್ಲಿ ಇದು ಇನ್ನೊಂದು ಮುಖ್ಯವಾದ ಪದವಾಗಿದೆ, 20 ಸಾರಿ ಕಾಣಿಸಿಕೊಳ್ಳುತ್ತದೆ. ಇದರ ಅರ್ಥ ದೇವರಿಲ್ಲದೆ ಪಾಪಿಗಳಾದ ಮನುಷ್ಯರಿಂದ ಅಭಿವೃದ್ಧಿ ಹೊಂದಿರುವ ವ್ಯವಸ್ಥೆ; ಸಮಾಜ, ಅದರ ಗುರಿಗಳು, ಅದರ ಯೋಚನೆಗಳು, ಧರ್ಮಗಳು, ಮನುಷ್ಯನ ಬಿದ್ದುಹೋಗಿರುವ ಸ್ವಭಾವದಿಂದ ಬರುವ ಜೀವಿತಗಳಾಗಿದೆ. ದೇವರ ವಾಕ್ಯದ ಪ್ರಕಾರವಾಗಿ ಲೋಕವು ದೇವರನ್ನು ತಿಳಿದುಕೊಂಡಿಲ್ಲ (ಯೋಹಾನ 14:17; 15:21). ವಿಶ್ವಾಸಿಗಳು ಯಾರೆಂಬುದಾಗಿ ಅದಕ್ಕೆ ಗೊತ್ತಿಲ್ಲ (1 ಯೋಹಾನ 3:1). ಅದು ಕ್ರಿಸ್ತನನ್ನು ಮತ್ತು ಆತನ ವಿಶ್ವಾಸಿಗಳನ್ನು ದ್ವೇಶಿಸುತ್ತದೆ (3:13; ಯೋಹಾನ 15:18,24). ಮತ್ತು ಅದು ಸೈತಾನಿಂದ ನಿಯಂತ್ರಿಸಲ್ಪಟ್ಟಿದೆ (5:19; ಎಫೆ 2:1-2). ದೇವರು ವಿಶ್ವಾಸಿಗಳನ್ನು ಈ ಲೋಕದೊಳಗಿನಿಂದ ತನಗಾಗಿ ವಿಶೇಷ ಜನರನ್ನಾಗಿ ಆರಿಸಿಕೊಂಡಿದ್ದಾನೆ (ಯೋಹಾನ 15:19; 17:6,14,16). ಅವರು ಲೋಕವನ್ನು ಪ್ರೀತಿಸದಿರಲು ಇವೆಲ್ಲವೂ ಸಾಕಾದ ಕಾರಣಗಳಾಗಿವೆ.

*"ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ"*– ಒಬ್ಬನೇ ಸತ್ಯ ದೇವರು ಮತ್ತು ಆತನ ಇಚ್ಛೆಗೆ ಈ "ಲೋಕವು" ಸಂಪೂರ್ಣವಾಗಿ ವಿರುದ್ಧವಾಗಿದೆ, ಆದ್ದರಿಂದ ಪ್ರೀತಿ ಮಾಡುವದೆಂದರೆ ಆತನನ್ನು ಸಂಪೂರ್ಣವಾಗಿ ಪ್ರೀತಿಸದಿರುವುದು. ಹಾಗಾದರೆ, ಲೋಕದ ಹಿಂದೆ ಓಡುವ, ಲೋಕವನ್ನು ಅನುಸರಿಸುವ ಮತ್ತು ಲೋಕದ ವಸ್ತುಗಳನ್ನು ಆಶಿಸುವ ಕ್ರೈಸ್ತರ ವಿಷಯವಾಗಿ ನಾವು ಏನು ಹೇಳೋಣ? ಅವರು ದೇವರನ್ನು ತಿಳಿದಿಲ್ಲ ಅಥವಾ ದೇವರನ್ನು ಪ್ರೀತಿಸುವುದಿಲ್ಲ. **16**

**2:16** *"ಮೊದಲಾದವುಗಳೆಲ್ಲವು"*– ಇಲ್ಲಿ ಯಾವ ವಿನಾಯಿತಿ ಇಲ್ಲ. ವಿಶ್ವಾಸಿಯ ಪ್ರೀತಿಗೆ ಸಮನಾದ ಯಾವ ಕಾರ್ಯವೂ ಈ ಲೋಕದಲ್ಲಿ ಇಲ್ಲ. ಮನುಷ್ಯನ ಬಿದ್ದು ಹೋದ ಸ್ವಭಾವದಿಂದ ಬರುವ ಆಶೆಗಳು, ಮನುಷ್ಯನು ನೋಡುವುದರ ಮೂಲಕ ಬರುವ ಆಶೆಗಳು, ಅಹಂಭಾವ ಮತ್ತು ತನ್ನನ್ನು ಹೆಚ್ಚಿಸಿಕೊಳ್ಳುವುದು – ಈ ಲೋಕದಲ್ಲಿರುವ ಕಾರ್ಯಗಳು ಇವು ಮಾತ್ರವಾಗಿವೆ – ಆದಿ 8:21. ಮತ್ತಾಯ 15:19; ರೋಮಾ 1:28-32 ಹೋಲಿಸಿರಿ. ಮತ್ತು ನಾವು ಅವುಗಳನ್ನು ಅನುಸರಿಸಬಾರದು – ರೋಮಾ 12:2.

*"ಶರೀರದಾಶೆ"*– ರೋಮಾ 7:5 ಟಿಪ್ಪಣಿ ನೋಡಿರಿ. **17**

**2:17** *"ಗತಿಸಿ ಹೋಗುತ್ತವೆ"*– ದೇವರು ಲೋಕಕ್ಕೆ ನ್ಯಾಯತೀರಿಸುತ್ತಾನೆ, ಶಿಕ್ಷಿಸುತ್ತಾನೆ, ಮತ್ತು ಅದನ್ನು ಶಾಶ್ವತವಾಗಿ ಗತಿಸಿಹೋಗುವಂತೆ ಮಾಡುತ್ತಾನೆ (ಅಪೊ 17:31; ಯೆಶಾಯ 24:1-13; 2 ಪೇತ್ರ 3:10-13).

*"ದೇವರ ಚಿತ್ತವನ್ನು ನೆರವೇರಿಸುವವನು"*– ಮತ್ತಾಯ 7:21. ನಾವು ನಂಬಿಕೆಯ ಮೂಲಕ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆಂದು ತಿಳಿದಿದ್ದರೂ, ನಂಬುವುದು ಮಾತ್ರವಲ್ಲ, ಮಾಡುವುದರ ಬಗ್ಗೆ ಯೋಹಾನನು ಇನ್ನೊಮ್ಮೆ ಒತ್ತು ನೀಡುವುದನ್ನು ಗಮನಿಸಿ. ಯಾಕೋಬ 2:14-26 ಹೋಲಿಸಿರಿ. ನಿಜವಾದ ನಂಬಿಕೆಯು ಒಬ್ಬನ ಜೀವಿತದಲ್ಲಿ ದೇವರಿಗೆ ವಿಧೇಯರಾಗುವ ಮನಸ್ಸು ಬರುವ ಹಾಗೆ ಮಹತ್ವದ ಬದಲಾವಣೆಯನ್ನು ಉಂಟುಮಾಡುತ್ತದೆ. ಅಪೊ 22:10 ಟಿಪ್ಪಣಿಯನ್ನು ನೋಡಿರಿ. ಕ್ರಿಸ್ತನಲ್ಲಿ ನಂಬಿಕೆಯಿಡುದು, ಆತನನ್ನು ಕರ್ತನು ಮತ್ತು ರಕ್ಷಕನಾಗಿ ಸ್ವೀಕರಿಸುವುದು, ಸುವಾರ್ತೆಗೆ ವಿಧೇಯರಾಗಿ ಆತನನ್ನು ಹಿಂಬಾಲಿಸಬೇಕೆಂಬುದೇ ದೇವರ ಚಿತ್ತವಾಗಿದೆ. ಅಂಥವರೇ ದೇವರೊಂದಿಗೆ ನಿತ್ಯಕ್ಕೂ ಜೀವಿಸುವವರಾಗಿದ್ದಾರೆ. ಬೇರೆ ಎಲ್ಲರೂ "ಎರಡನೆಯ ಮರಣವನ್ನು" ಅನುಭವಿಸಬೇಕಾಗುತ್ತದೆ (ಪ್ರಕ 20:14-15). **18**

**2:18** *"ಬಹುಮಂದಿ"*– ಮತ್ತಾಯ 24:4-5; 2 ಕೊರಿಂಥ 11:13-15 ಹೋಲಿಸಿರಿ.

*"ಕ್ರಿಸ್ತವಿರೋಧಿ"*– ವ.22; 4:3; 2 ಯೋಹಾನ 7; 2 ಥೆಸ 2:3-4. ಕ್ರಿಸ್ತನನ್ನು ವಿರೋಧಿಸಲು ಕ್ರಿಸ್ತವಿರೋಧಿಯು ಬರುತ್ತಾನೆ, ತಾನೆ ಕ್ರಿಸ್ತನೆಂದು ಹೇಳಿಕೊಳ್ಳಬಹುದು. ಅವನು ತಾನೇ ದೇವರೆಂದು ನಿಶ್ಚಯವಾಗಿ ಹೇಳಿಕೊಳ್ಳುವನು.

*"ಇದು ಕಡೇ ಗಳಿಗೆಯಾಗಿದೆ"*– ಅಪೊ 2:17; ರೋಮಾ 13:11-12; ಯಾಕೋಬ 5:3; 1 ಪೇತ್ರ 1:20; ಪ್ರಕ 1:3. ಈ ಕಡೇ ಗಳಿಗೆಯು ಇನ್ನೂ ಹೋಗುತ್ತಲೇ ಇದೆ. ಒಂದು ವೇಳೆ ನಾವು ಈ ಕಡೇ ಗಳಿಗೆಯ ಕಡೇಯ ನಿಮಿಷಗಳಲ್ಲಿದ್ದೇವೆ. 2 ಪೇತ್ರ 3:8 ಹೋಲಿಸಿರಿ. **19**

**2:19** *"ನಮ್ಮವರಾಗಿದ್ದರೆ"*– ಅಪೊ 20:30. ಈ ಕ್ರಿಸ್ತವಿರೋಧಿಗಳು ಕ್ರಿಸ್ತನ ಹಿಂಬಾಲಕರೆಂದು ಹೇಳಿಕೊಳ್ಳುತ್ತಿದ್ದರು.

*"ಅವರು ನಮ್ಮವರಾಗಿರಲಿಲ್ಲ"*– ಅಂದರೆ, ಅವರು ನಿಜವಾದ ವಿಶ್ವಾಸಿಗಳಾಗಿರಲಿಲ್ಲ,

ಹೊಸದಾಗಿ ಹುಟ್ಟಿರಲಿಲ್ಲ, ದೇವರ ಆತ್ಮೀಯ ಕುಟುಂಬಕ್ಕೆ ಸೇರಿದವರಾಗಿರಲಿಲ್ಲ. ಅವರು ಹೊರಟು ಹೋಗಿರುವದನ್ನು ನೋಡಿದರೆ ಅವರು ಆ ಕುಟುಂಬಕ್ಕೆ ಸೇರಿದವರಲ್ಲವೆಂದು ತೋರಬರುತ್ತದೆ. ದೇವರಿಂದ ಆರಿಸಿಕೊಳ್ಳಲ್ಪಟ್ಟವರು ನಂಬಿಕೆಯಲ್ಲಿ ನೆಲೆಸಿರುತ್ತಾರೆ (ಇಬ್ರಿ 10:39; ಯೋಹಾನ 6:67-68). **20**

**2:20** *"ಅಭಿಷೇಕವನ್ನು ಹೊಂದಿದವರಾಗಿದ್ದು"*– 2 ಕೊರಿಂಥ 1:21-22 ಹೋಲಿಸಿರಿ. ಈ ಅಭಿಷೇಕವು ದೇವರಾತ್ಮನ ಬಹುಮಾನವಾಗಿದೆ (3:24). ಇದು ವಿಶ್ವಾಸಿಗಳನ್ನು ದೇವರ ಸೇವಕರಾಗಿ ಬೇರ್ಪಡಿಸುತ್ತದೆ. ಕ್ರಿಸ್ತನು ಅಂದರೆ "ಅಭಿಷೇಕಿಸಲ್ಪಟ್ಟವನು" –(ಮತ್ತಾಯ 1:1). ವಿಶ್ವಾಸಿಗಳಿಗೆ ಆತನಿಂದ ಅಭಿಷೇಕವಿದೆ ಆದ್ದರಿಂದ ಕ್ರಿಸ್ತವಿರೋಧಿಗಳು ಕಾಣಿಸಿಕೊಂಡಾಗ ಅವರನ್ನು ಗುರುತಿಸುತ್ತಾರೆ. ಅವರ ಬೋಧನೆಗಳ ವ್ಯತ್ಯಾಸವನ್ನು ತಿಳಿದುಕೊಳ್ಳುತ್ತಾರೆ ಮತ್ತು ನಡವಳಿಕೆಯನ್ನು ಗ್ರಹಿಸಿಕೊಂಡು ಅವರು ಕ್ರಿಸ್ತನವರಲ್ಲವೆಂದು ತಿಳಿದುಕೊಳ್ಳುತ್ತಾರೆ.

*"ಪವಿತ್ರನಾಗಿರುವಾತನು"*– ಮಾರ್ಕ 1:24; ಅಪೊ 2:27; 3:14.

*"ಎಲ್ಲರೂ ತಿಳಿದವರಾಗಿದ್ದೀರಿ"*– ಖಂಡಿತವಾಗಿಯೂ ಆ ವಿಶ್ವಾಸಿಗಳಿಗೆ ಎಲ್ಲಾ ವಿಷಯಗಳ ಬಗ್ಗೆ ತಿಳಿಯಬಹುದಾದ ಎಲ್ಲವನ್ನೂ ತಿಳಿದಿದ್ದಾರೆಂದು ಯೋಹಾನನು ಹೇಳುತ್ತಿಲ್ಲ. ದೇವರಿಗೆ ಮಾತ್ರ ಎಲ್ಲವೂ ತಿಳಿದಿರುತ್ತದೆಂಬುದಾಗಿ ಅವನಿಗೆ ಅರ್ಥವಾಗಿತ್ತು. ಆದರೆ ಅವನು ಯಾರಿಗೆ ಬರೆಯುತ್ತಿದ್ದನೋ ಅವರಲ್ಲಿ ದೇವರಾತ್ಮನಿದ್ದನು ಮತ್ತು ದೇವರ ಬಗ್ಗೆಯ ಸತ್ಯವನ್ನು ಅವರಿಗೆ ಚೆನ್ನಾಗಿ ಬೋಧಿಸಲಾಗಿತ್ತು. ಅವರಿಗೆ ಬರೆಯಲಾದ ಎಲ್ಲಾ ವಿಷಯವು ಸತ್ಯವೆಂದು ಅವರಿಗೆ ತಿಳಿದಿತ್ತು. ಈಗ ನಮ್ಮ ಹತ್ತಿರ ಸತ್ಯವೇದವಿದೆ ಮತ್ತು ದೇವರಾತ್ಮನು ಎಲ್ಲಾ ಆತ್ಮೀಕ ಜ್ಞಾನದ ಮೂಲವಾಗಿದ್ದಾನೆ. **21**

**2:21** ವಚನ 13 – ದೇವರು ಸತ್ಯವೇದದಲ್ಲಿ ಪ್ರಕಟಿಸಿರುವ ಸತ್ಯದಿಂದ ನಮ್ಮನ್ನು ದಾರಿತಪ್ಪಿಸುವ ಯಾವುದೇ ವಿಷಯವು ತಪ್ಪು ಮತ್ತು ಅಪಾಯಕರವಾಗಿದೆ. **22**

**2:22** ಯೇಸು ಅಭಿಷಿಕ್ತನಾದ ಮೆಸ್ಸೀಯನಲ್ಲ, ದೇವರ ಮಗನಲ್ಲ ಎಂದು ಹೇಳುವ ಮನುಷ್ಯನು ಸುಳ್ಳುಗಾರನಾಗಿದ್ದಾನೆ, ಮತ್ತು ಸುಳ್ಳುಗಳಲ್ಲಿಯೇ ಕೆಟ್ಟದಾದ ಸುಳ್ಳಾಗಿದೆ. ಕೆಲವು ಜನರು ಹೀಗೆ ಮಾಡುತ್ತಾರೆ. ಯೇಸುವು ಮನುಷ್ಯನ ಮತ್ತು ದೇವರ ಸ್ವಭಾವದಿಂದ ಸಂಯೋಜಿತನಾಗಿದ್ದಾನೆ ಎಂಬುದನ್ನು, ದೇವರ ಒಬ್ಬನೇ ಮಗನಾದ ಯೇಸುವು ಮನುಷ್ಯನಾದನು ಎಂಬುದನ್ನು ಅವರು ನಿರಾಕರಿಸುತ್ತಾರೆ. ಮಗನನ್ನು ನಿರಾಕರಿಸುವ ಇಂಥವರು ಆತನನ್ನು ಕಳಿಹಿಸಿಕೊಟ್ಟ ತಂದೆಯಾದ ದೇವರನ್ನು ಸಹ ನಿರಾಕರಿಸುತ್ತಿದ್ದಾರೆ. ಯೋಹಾನ 5:23 ಹೋಲಿಸಿರಿ. ಯೇಸುವಿನ ದೈವತ್ವದ ವಿಷಯವಾಗಿ ಫಿಲಿಪ್ಪಿ 2:6; ಮತ್ತು ಲೂಕ 2:11 ರಲ್ಲಿನ ಉಲ್ಲೇಖಗಳನ್ನು ನೋಡಿರಿ. **23**

**2:23** ಜನರು ಏನೇ ಯೋಚಿಸಲಿ, ದೇವರ ಮಗನಾದ ಯೇಸು ಕ್ರಿಸ್ತನನ್ನು ನಂಬದೆ ಮತ್ತು

ಸ್ವೀಕರಿಸದಿರುವವರು ದೇವರನ್ನು ಹೊಂದಿಲ್ಲ. ದೇವರನ್ನು ಸ್ವೀಕರಿಸಿ ಆತನ ಮಗನನ್ನು ನಿರಾಕರಿಸುವುದು ವಿಚಿತ್ರವಾಗಿದೆ. ಆದರೆ ಯೇಸುವನ್ನು ನಂಬಿರುವವರು ತಂದೆಯಾದ ದೇವರನ್ನು ತಮ್ಮ ತಂದೆಯಾಗಿ ಹೊಂದಿದ್ದಾರೆ. **24**

**2:24** *"ಗೊಂಡಿದ್ದರೆ"*– ಇಬ್ರಿ 3:6,14; ಕೊಲೊ 1:23; 1 ಕೊರಿಂಥ 15:2.

*"ಕೇಳಿದ್ದೀರೋ"*– 1:1; 2:7.

*"ನೆಲೆಗೊಂಡಿದ್ದರೆ"*– ಯೋಹಾನ 15:4-5,7,9,10. **25**

**2:25** *"ನಮಗೆ ವಾಗ್ದಾನ ಮಾಡಿದ್ದು ನಿತ್ಯಜೀವವು"*– 5:11; ತೀತ 1:2; ಯೋಹಾನ 3:16; 6:47. **26**

**2:26** *"ಸನ್ಮಾರ್ಗದಿಂದ"*– 3:7; ಮತ್ತಾಯ 24:4,14; 2 ಕೊರಿಂಥ 11:3; ಪ್ರಕ 12:9. ನಾವು ಈ ರೀತಿಯ ಲೋಕದಲ್ಲಿ ಜೀವಿಸುತ್ತಿದ್ದೇವೆ – ನಾವು ಕರ್ತನಾದ ಯೇಸು ಕ್ರಿಸ್ತನನ್ನು ನಂಬಿದರೆ, ಸೈತಾನನು ಮತ್ತು ಅವನ ದೂತರು ತಮ್ಮ ಎಲ್ಲಾ ಪ್ರಯತ್ನದಿಂದ ನಮ್ಮನ್ನು ಮೋಸಗೊಳಿಸಲು ಮತ್ತು ನಿಜವಾದ ನಂಬಿಕೆಯಿಂದ ದೂರಮಾಡಲು ಪ್ರಯತ್ನಿಸುತ್ತಾರೆ. **27**

**2:27** *"ನೆಲೆಗೊಂಡಿರುವದರಿಂದ"*– ಪವಿತ್ರಾತ್ಮನು ವಿಶ್ವಾಸಿಗಳನ್ನು ಎಂದಿಗೂ ಬಿಟ್ಟುಬಿಡುವುದಿಲ್ಲ. (ಯೋಹಾನ 14:16; ಎಫೆ 1:13-14).

*"ನಿಮಗೆ ಉಪದೇಶಮಾಡುವಂಥದ್ದಾಗಿದ್ದು"*– ಸುಳ್ಳು ಬೋಧಕರ ಮತ್ತು ಕ್ರಿಸ್ತ ವಿರೋಧಿಗಳ ಬಗ್ಗೆ ಅವರಿಗೆ ಈಗಾಗಲೇ ಉಪದೇಶಮಾಡಲಾಗಿದೆ – ಅದು ಇಲ್ಲಿನ ವಿಷಯವಾಗಿದೆ. ಮತ್ತು ಅವರು ಕಲಿತದ್ದನ್ನು ಅರ್ಥಮಾಡಿಕೊಳ್ಳಲು ಅವರಲ್ಲಿ ದೇವರಾತ್ಮನಿದ್ದನು. ಯಾವುದೇ ಹೊಸ ಸತ್ಯಗಳನ್ನು ಬೋಧಿಸಲು ಅವರಿಗೆ ಇನ್ನು ಅಪೋಸ್ತಲರು ಬೇಕಾಗಿರಲಿಲ್ಲ, ಮತ್ತು ಹೊಸ ಸತ್ಯಗಳು ಇಲ್ಲದಿದ್ದರೂ ಇದೆ ಎಂದು ಹೇಳಿಕೊಳ್ಳುತ್ತಿದ್ದ ಸುಳ್ಳು ಬೋಧಕರಂತೂ ಅವರಿಗೆ ಖಂಡಿತವಾಗಿಯೂ ಬೇಕಾಗಿರಲಿಲ್ಲ. ಸಭೆಯಗಳಲ್ಲಿ ಬೋಧಕರ ಅವಶ್ಯಕತೆ ಇಲ್ಲವೆಂದು ಯೋಹಾನನು ಹೇಳುತ್ತಿಲ್ಲ. ಅವನೇ ಬೋಧಕರನ್ನು ನೇಮಿಸಿದನು (ಎಫೆ 4:11; 1 ಕೊರಿಂಥ 12:28), ಮತ್ತು ಯೋಹಾನನು ಸಹ ಅವರಲ್ಲಿ ಒಬ್ಬನಾಗಿದ್ದನು. ಯೋಹಾನನು ಯಾವ ವಿಶ್ವಾಸಿಗಳಿಗೆ ಬರೆಯುತ್ತಿದ್ದನೋ ಅವರು ಸತ್ಯವನ್ನು ತಿಳಿಯಲು ಅವರಿಗೆ ಬೋಧಿಸಲಾಗಿತ್ತು, ಆದರೆ ಈ ದಿನಗಳಲ್ಲಿ ಅನೇಕ ವಿಶ್ವಾಸಿಗಳಿಗೆ ಇದನ್ನು ಬೋಧಿಸದಿರುವದರಿಂದ ಅವರಿಗೆ ಸತ್ಯವೇ ಗೊತ್ತಿಲ್ಲ. ಮತ್ತು ನಮ್ಮ ಯಾರಿಗೂ, ನಮಗೆ ತಿಳಿದಿದೆ ಎಂದು ನಾವು ಯೋಚಿಸಿದರೂ, ದೇವರ ಸತ್ಯತೆಗಳನ್ನು ದೈವಿಕ ಬೋಧಕರಿಂದ ನಾವು ಕಲಿಯಲು ಸಾಧ್ಯವಿಲ್ಲ ಎಂದು ಸೊಕ್ಕಿನಿಂದ ಯೋಚಿಸಬೇಕು.

*"ಅಭಿಷೇಕವು ನಿಮಗೆ ಉಪದೇಶ ಮಾಡುತ್ತದೆ"*– ಬೇರೆಯಾವುದೇ ಮಾರ್ಗದಮೂಲಕ ಕಲಿಯಲಾರದ ಆತ್ಮೀಕ ಸತ್ಯಗಳನ್ನು ದೇವರಾತ್ಮನ ಮೂಲಕವಾಗಿ ನಾವು ಕಲಿಯಬಹುದು (1 ಕೊರಿಂಥ 2:10-14). ಯೆಶಾಯ 54:13; ಕೀರ್ತನೆ 25:4-5 ಹೋಲಿಸಿರಿ. ದೈವಿಕ ಬೋಧಕನು

ವಿಶ್ವಾಸಿಗಳಲ್ಲಿ ಜೀವಿಸುವವನಾಗಿದ್ದಾನೆ – ರೋಮಾ 8:9,15,16. **28**

**2:28** *"ಆತನಲ್ಲಿ ನೆಲೆಗೊಂಡಿರೋಣ"*– ವ.24.

*"ಪ್ರತ್ಯಕ್ಷನಾಗುವಾಗ"*– 3:2; ಮತ್ತಾಯ 24:30; ಕೊಲೊ 3:4; 1 ತಿಮೊ 6:14; ತೀತ 2:13; ಇಬ್ರಿ 9:28.

*"ನಾಚಿಕೆಪಡದೆ"*– ಆತನ ಮುಂದೆ ನಾಚಿಕೆಪಡದೆ ನಿಲ್ಲಬೇಕಾದರೆ ಇರುವುದು ಒಂದೇ ಮಾರ್ಗ, ಆತನು ಸಂತೋಷಿಸುವ ರೀತಿಯಲ್ಲಿ ಜೀವಿಸುವುದು. ಮತ್ತು ಇದು ನೆರವೇರಬೇಕಾದರೆ ಆತನಲ್ಲಿ ನಿರಂತರವಾಗಿ ಜೀವಿಸುವುದಾಗಿದೆ – ಯೋಹಾನ 15:4-5. **29**

**2:29** *"ನೀತಿಯನ್ನು"*– ಒಬ್ಬ ವ್ಯಕ್ತಿ ಮಾಡುವ ಕ್ರಿಯೆಗಳ ಮೂಲಕ ಅವನು ಯಾರೆಂದು ತಿಳಿಯಬಹುದು (ಮತ್ತಾಯ 7:15-20). ಸರಿಯಾಗಿ ಮಾಡುವುದು ಎಂಬುದರ ವಿಷಯವಾದ ಟಿಪ್ಪಣಿಯನ್ನು ಮತ್ತಾಯ 7:21; ರೋಮಾ 6:16-18; 8:4 ನೋಡಿರಿ. ವಾಸ್ತವವಾಗಿ, ನಾವು ಹೀಗೆ ಹೇಳಬಹುದು ಒಬ್ಬ ವ್ಯಕ್ತಿಯು ಏನನ್ನು ಮಾಡುತ್ತಾನೋ ಅವನು ಅದೇ ಆಗಿರುತ್ತಾನೆ.

*"ಆತನಿಂದ ಹುಟ್ಟಿದವನು"*– ಯೋಹಾನ 3:3-8; ಯಾಕೋಬ 1:18; 1 ಪೇತ್ರ 1:23.

# 3 1

**3:1** *"ಎಂಥಾ ಪ್ರೀತಿ"*– 4:8-10; ಯೋಹಾನ 3:16; ರೋಮಾ 5:8; ಎಫೆ 1:4; 2:4. ನಾವು ನರಕಕ್ಕಲ್ಲದೆ ಬೇರಾವುದಕ್ಕೂ ಯೋಗ್ಯರಲ್ಲ. ಆತನ ಮಹತ್ತಾದ ಪ್ರೀತಿಯು ನಮ್ಮಂತಹ ಪಾಪಿಗಳನ್ನು ದೇವರು ನಾವು ಹೇಗಿದ್ದೇವೋ ಹಾಗೆಯೇ ತೆಗೆದುಕೊಂಡನು ಮತ್ತು ನಮ್ಮನ್ನು ತನ್ನ ಮಕ್ಕಳಾಗಿ ಮಾರ್ಪಡಿಸಿದನು.

*"ತಂದೆ"*– ಟಿಪ್ಪಣಿ ಮತ್ತಾಯ 5:16.

*"ದೇವರ ಮಕ್ಕಳು"*– ಯೋಹಾನ 1:12-13; ರೋಮಾ 8:16-17; ಫಿಲಿಪ್ಪಿ 2:15; ಇಬ್ರಿ 2:13; 1 ಪೇತ್ರ 1:14. ಎಲ್ಲರೂ ದೇವರ ಮಕ್ಕಳಲ್ಲವೆಂಬುದನ್ನು ಗಮನಿಸಿರಿ – ಯಾರು ಕರ್ತನಾದ ಯೇಸುವನ್ನು ಸ್ವೀಕರಿಸಿದ್ದಾರೋ ಮತ್ತು ದೇವರಾತ್ಮನಿಂದ ಹೊಸದಾಗಿ ಹುಟ್ಟಿದ್ದಾರೋ ಅವರು ಮಾತ್ರ ದೇವರ ಮಕ್ಕಳಾಗಲು ಸಾಧ್ಯ.

*"ನಮ್ಮನ್ನು ತಿಳಿದುಕೊಳ್ಳುವುದಿಲ್ಲ . . . ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ"*– ಯೋಹಾನ 15:21; 16:3. ವಿಶ್ವಾಸಿಗಳು ಹೊಸ ಜನರಾದ್ದರಿಂದ, ಹೊಸದಾಗಿ ಹುಟ್ಟಿರುವದರಿಂದ ಮತ್ತು "ಕ್ರಿಸ್ತನಲ್ಲಿ" ರುವದರಿಂದ ಲೋಕವು ಕ್ರಿಸ್ತನನ್ನು ತಿಳಿಯದೆ ಇರುವುದರಿಂದ ಅವರನ್ನು ಸಹ ತಿಳಿಯದು (ಯೋಹಾನ 17:14,16). ಲೋಕವು ಅವರ ಸ್ವಭಾವವನ್ನು, ಅವರ ಉದ್ದೇಶಗಳನ್ನು, ಅವರ ನಂಬಿಕೆಯನ್ನು ಅಥವಾ ದೇವರು ಅವರ ಹೃದಯಲ್ಲಿಟ್ಟಿರುವುದನ್ನು ಅರ್ಥಮಾಡಿಕೊಳ್ಳುವುದಿಲ್ಲ. **2**

**3:2** *"ನಾವು ಏನಾಗುವೆವೋ"*– ನಿತ್ಯತ್ವದಲ್ಲಿ ನಾವು ದೇವರ ಮಕ್ಕಳಾಗಿ ಏನಾಗುವೆವೆಂದು ದೇವರು ನಮಗೆ ಸಂಪೂರ್ಣವಾಗಿ ಪ್ರಕಟಿಸಿಲ್ಲ.

*"ಅದು ಪ್ರತ್ಯಕ್ಷವಾದಾಗ"*– 2:28.

*"ನಾವು ಆತನ ಪ್ರಕಾರವೇ ಇರುವೆವು"*– ರೋಮಾ 8:29. ಅನೇಕ ಮನುಷ್ಯರಿಗೆ ಇದು ಅತ್ಯಧಿಕವಾಗಿ ಮನವರಿಕೆಯ ಗುರಿಯಾಗಿದೆ. ವಿಶ್ವಾಸಿಗಳು ಆತನನ್ನು ನೋಡುವಾಗ ಅವರು ಆತನ ಪ್ರಕಾರವೇ ಶಾಶ್ವತವಾಗಿ ಬದಲಾಗುತ್ತಾರೆ (1 ಕೊರಿಂಥ 15:48-54).

*"ಆತನಿರುವ ಪ್ರಕಾರವೇ ಆತನನ್ನು ನೋಡುವೆವು"*– ಮತ್ತಾಯ 5:8; 1 ಕೊರಿಂಥ 13:12; ಪ್ರಕ 22:4. **3**

**3:3** ಯಾರು ಕ್ರಿಸ್ತನು ಬರುವಾಗ ಆತನಂತೆ ಇರಲು ನಿರೀಕ್ಷಿಸುತ್ತಾರೋ ಅವರು ಈಗಲೇ ಆತನ ಹಾಗೆ ಇರಲು ಇಚ್ಛಿಸುತ್ತಾರೆ. ಆತನಂತೆ ಆಗುವ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದೆ (2 ಕೊರಿಂಥ 3:18; ಕೊಲೊ 3:9-10), ಮತ್ತು ನಿಜವಾದ ವಿಶ್ವಾಸಿಗಳು ಶುದ್ಧಗೊಳಿಸುವ ದೇವರ ಕೆಲಸದಲ್ಲಿ ಸಹಕರಿಸುವರು. ಇಬ್ರಿ 12:14 ಹೋಲಿಸಿರಿ.

*"ಶುದ್ಧಿಮಾಡಿಕೊಳ್ಳುತ್ತಾನೆ"*– 1:7,9; 2 ಕೊರಿಂಥ 7:1. ನಾವು ಬೆಳಕಿನಲ್ಲಿ ನಡೆಯುವದರಿಂದ ಮಾತ್ರ ನಮ್ಮನ್ನು ನಾವು ಶುದ್ಧಪಡಿಸಿಕೊಳ್ಳಬಹುದು. **4**

**3:4** ಪಾಪವು ದೇವರ ವಿರೋಧವಾಗಿ ಮತ್ತು ಸರಿ ಮತ್ತು ತಪ್ಪುಗಳ ದೇವರ ಪ್ರಕಟನೆಗಳ ವಿರುದ್ಧವಾಗಿ ಒಬ್ಬನ ಸ್ವಇಚ್ಛೆಯನ್ನು ಕಟ್ಟುತ್ತಿದೆ. ಈ ಜಗತ್ತಿನಲ್ಲಿ ದೇವರ ನಿಯಮಗಳು, ತತ್ವಗಳು ಮತ್ತು ನೀತಿಯು ಇಲ್ಲವೆಂಬತೆ ವರ್ತಿಸುವುದು. ಇದರ ಅರ್ಥ ಒಬ್ಬನ ಸ್ವಾರ್ಥ ಆಸೆಗಳು ಅವನನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುವುದು. **5**

**3:5** *"ನಮ್ಮ ಪಾಪಗಳನ್ನು ಹೋಗಲಾಡಿಸುವದಕ್ಕಾಗಿ"*– ಯೋಹಾನ 1:29; ರೋಮಾ 11:27; ಇಬ್ರಿ 9:28; 10:11-14,17.

*"ಆತನಲ್ಲಿ ಪಾಪವಿಲ್ಲ"*– ಇಬ್ರಿ 4:15; 7:26. ಇದನ್ನು ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ಮಾತ್ರ ಹೇಳಬಹುದು. ವಿಶ್ವಾಸಿಗಳು ತಮ್ಮ ಬಗ್ಗೆ ಹೀಗೆ ಹೇಳಿಕೊಳ್ಳಬಾರದೆಂದು ಯೋಹಾನನು ಈಗಾಗಲೇ ಸೂಚಿಸಿದ್ದಾನೆ – 1:8. **6**

**3:6** ಎಲ್ಲರೂ ಪಾಪದಲ್ಲಿದ್ದಾರೆ ಅಥವಾ ಕ್ರಿಸ್ತನಲ್ಲಿದ್ದಾರೆ. ಪಾಪದಲ್ಲಿರುವವರು ಪಾಪವನ್ನು ತಮ್ಮ ಜೀವನ ಶೈಲಿಯಾಗಿಸಿಕೊಂಡಿದ್ದಾರೆ. ಕ್ರಿಸ್ತನಲ್ಲಿರುವವರು ಇದನ್ನು ಮಾಡಲು ಸಾಧ್ಯವಿಲ್ಲ. ಅವರು ಹೊಸದಾಗಿ ಹುಟ್ಟಿದ್ದಾರೆ (2:29). ಅವರು ನೀತಿಯುಳ್ಳ ದೇವರ ಮಕ್ಕಳು ಮತ್ತು ಆದ್ದರಿಂದ ಅವರಲ್ಲಿ ನೀತಿಯ ಸ್ವಭಾವವಿದೆ (1:3; 4:13) ದೇವರ ಆತ್ಮ ಅವರಲ್ಲಿ ವಾಸಿಸುತ್ತದೆ. ಮುಂಚೆ ಇದ್ದ ಹಾಗೆ ಅವರು ಈಗ ಇರಲು ಅಸಾಧ್ಯ (ಎಫೆ 2:1-3). ವಿಶ್ವಾಸಿಗಳು ಕೆಲವು ಸಾರಿ ಪಾಪದಲ್ಲಿ ಬೀಳುತ್ತಾರೆ (1:7; 2:1; 5:16), ಆದರೆ ತಿಳಿದು ಪಾಪವನ್ನು ತಮ್ಮ ಜೀವನದ ಶೈಲಿಯನ್ನಾಗಿ ಮುಂದುವರಿಸಿಕೊಂಡು ಹೋಗಲು

ಸಾಧ್ಯವಿಲ್ಲ (ಜ್ಞಾನೋ 24:16). ಅವರು ಪಾಪಮಾಡಿದರೆ, ಅವರ ಹೊಸ ಸ್ವಭಾವವು ಅದನ್ನು ವಿರೋಧಿಸುತ್ತದೆ ಮತ್ತು ಅದನ್ನು ನಿರಾಕರಿಸುವಂತೆ ಮಾಡುತ್ತದೆ ಮತ್ತು ಅದರಿಂದ ಹೊರ ಬರಲು ಪ್ರಯತ್ನಿಸುತ್ತದೆ. ಮತ್ತು ಕ್ರಿಸ್ತನು ಅವರು ಅದರಿಂದ ಹೊರ ಬರುವಂತೆ ಪ್ರಾರ್ಥಿಸುತ್ತಿದ್ದಾನೆ. ಮತ್ತು ಅವರಲ್ಲಿರುವ ಪವಿತ್ರಾತ್ಮನು (ಲೂಕ 22:31-32; ಯೋಹಾನ 17:17; ಇಬ್ರಿ 7:25) ಅವರಲ್ಲಿ ಅರುಹನ್ನು ಹುಟ್ಟಿಸುತ್ತದೆ ಮತ್ತು ಅದರಿಂದ ಹೊರ ಬರುವಂತೆ ಒತ್ತಾಯಿಸುತ್ತದೆ. ಕ್ರೈಸ್ತರೆಂದು ಹೇಳಿಕೊಂಡು ಪಾಪದಲ್ಲಿ ನೆಲಸಿ ಮತ್ತು ಅದನ್ನೇ ತಮ್ಮ ಜೀವನ ಶೈಲಿಯಾಗಿ ಅಭ್ಯಾಸ ಮಾಡುವುದಾದರೆ ಅವರು ಕ್ರಿಸ್ತನ ಕುರಿಯಲ್ಲ ಮತ್ತು ಅವರು ದೇವರಿಂದ ಹುಟ್ಟಿದವರಲ್ಲ. 2 ಪೇತ್ರ 2:22 ಹೋಲಿಸಿರಿ. ದೇವರ ಮಕ್ಕಳು ಸೈತಾನನ ಮಕ್ಕಳಿಗಿಂತಲೂ ಬಹಳ ವ್ಯತ್ಯಾಸವುಳ್ಳವರಾಗಿದ್ದಾರೆ ಮತ್ತು ಇದು ಅವರ ನಡವಳಿಕೆಯಲ್ಲಿ ಕಾಣಿಸುತ್ತದೆ.

*"ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು"*– ಇಲ್ಲಿ ಗ್ರೀಕ್ ಪದವು ವರ್ತಮಾನ ಕಾಲದಲ್ಲಿದೆ ಮತ್ತು ಇದನ್ನು ಹೀಗೆ ಭಾಷಾಂತರಿಸಬಹುದು, ಮತ್ತು ಇದು ಖಂಡಿತವಾಗಿಯೂ ಸತ್ಯವನ್ನು ನಿಖರವಾಗಿ ಹೇಳುತ್ತದೆ. ಅಥವಾ ಇದನ್ನು ಹೀಗೆ ಭಾಷಾಂತರಿಸಬಹುದು "ಪಾಪದಲ್ಲಿ ಮುಂದುವರೆಯಿರಿ" ಅಥವಾ ಬಹುಶಃ "ಪಾಪವನ್ನು ಅಭ್ಯಾಸಿಸಿರಿ". "ಪಾಪ ಮಾಡನು" ಎಂಬ ಭಾಷಾಂತರವು, ವಿಶ್ವಾಸಿಯು ಎಂದಿಗೂ ಪಾಪ ಮಾಡುವುದಿಲ್ಲ ಎಂದು ಸೂಚಿಸುತ್ತದೆ. ಆದರೆ ಯೋಹಾನನು (ಬೇರೆ ಅಪೋಸ್ತಲರಂತೆ) ಇದು ಸತ್ಯವಲ್ಲವೆಂದು ಈಗಾಗಲೇ ತೋರಿಸಿಕೊಟ್ಟಿದ್ದಾರೆ – 1:9; 2:1. **7**

**3:7** *"ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವದಕ್ಕೆ ಯಾರಿಗೂ ಅವಕಾಶ ಕೊಡಬೇಡಿರಿ"*– 2:26; 1 ಕೊರಿಂಥ 6:9; ಗಲಾ 6:7; ಎಫೆ 5:6. ಜನರಿಗೆ ಕೇವಲ ಎರಡು ಜೀವನ ವಿಧಾನಗಳಿವೆ – ಪಾಪದ ಮಾರ್ಗ ಮತ್ತು ನೀತಿಯ ಮಾರ್ಗ. ಪ್ರತಿಯೊಬ್ಬರೂ ಒಂದಲ್ಲ ಒಂದು ಮಾರ್ಗವನ್ನು ಅನುಸರಿಸುತ್ತಿದ್ದಾರೆ (ಮತ್ತಾಯ 7:13-14; ರೋಮಾ 2:6-10). ನೀತಿವಂತನು ಪಾಪವನ್ನೇ ಮಾಡುವದಿಲ್ಲ ಎಂದು ಇದರ ಅರ್ಥವಲ್ಲ (1:7,9; 2:1; ಯಾಕೋಬ 3:2), ಅಥವಾ ಪಾಪಿಯು ಎಂದಿಗೂ ನೀತಿಯುಳ್ಳ ಕಾರ್ಯವನ್ನು ಮಾಡುವುದಿಲ್ಲ. ಯೋಹಾನನು ಒಬ್ಬ ವ್ಯಕ್ತಿಯ ಸಂಪೂರ್ಣ ಜೀವಿತದ ಬಗ್ಗೆ ಮಾತನಾಡುತ್ತಿದ್ದಾನೆ. ಒಬ್ಬ ವ್ಯಕ್ತಿಯು ನೀತಿಯನ್ನು ಅನುಸರಿಸುತ್ತಿದ್ದರೆ ನೀತಿಯ ಕಾರ್ಯಗಳು ಅವನ ಜೀವಿತದಲ್ಲಿ ಪ್ರಧಾನವಾಗಿರುತ್ತದೆ. ಪಾಪಿಯ ಜೀವಿತದಲ್ಲಿ ಕೆಟ್ಟಕಾರ್ಯಗಳು ಪ್ರಧಾನವಾಗಿರುತ್ತವೆ.

*"ನೀತಿವಂತನು"*– 2:29. **8**

**3:8** *"ಸೈತಾನನು"*– ಮತ್ತಾಯ 4:1; ಎಫೆ 2:2. ಪ್ರತಿಯೊಬ್ಬ ವ್ಯಕ್ತಿಯು ದೇವರ ಅಥವಾ ಸೈತಾನನವನಾಗಿರುತ್ತಾನೆ (ವ.10). ಯೋಹಾನ 8:44. ದೇವರು ನಮ್ಮ ಜೀವಿತವನ್ನು

ಆಳದಿದ್ದರೆ, ಸೈತಾನನು ಆಳುತ್ತಾನೆ.

*"ಆದಿಯಿಂದಲೂ"*– ಸೈತಾನನು ಪಾಪದ ಮೂಲವಾಗಿದ್ದಾನೆ.

*"ಸೈತಾನನ ಕೆಲವನ್ನು ಲಯಮಾಡುವದಕ್ಕೋಸ್ಕರವೇ"*– ಸೈತಾನನ ಕೆಲಸವು ಪಾಪ ಮತ್ತು ಮರಣ. ಕ್ರಿಸ್ತನು ತನ್ನ ಜನರಲ್ಲಿ ಈ ಕಾರ್ಯಗಳನ್ನು ಲಯ ಮಾಡಲು ಬಂದನು. ಅವರ ಪಾಪಗಳಿಗೋಸ್ಕರ ಮರಣ ಹೊಂದುವುರ ಮತ್ತು ಪುನುರುತ್ಥಾನ ಹೊಂದುವದರ ಮೂಲಕ ಇವುಗಳನ್ನು ನಾಶಮಾಡಲು ಮತ್ತು ಸೈತಾನನ್ನು ಸಹ ನಾಶಮಾಡಲು ಅಸ್ತಿವಾರವನ್ನು ಹಾಕಿದನು. **9**

**3:9** *"ಪಾಪಮಾಡಿಕೊಂಡೇ ಇರನು"*– ವ.6.

*"ಆತನ ಬೀಜ"*– ದೇವರ ಬೀಜ, ಆತ್ಮಿಕ ಬೀಜವು ಆತ್ಮಿಕ ಜೀವಿತವನ್ನು ಕೊಡುತ್ತಾರೆ (1 ಕೊರಿಂಥ 9:11). ಈ ಬೀಜವು ದೇವರ ವಾಕ್ಯ (ಯಾಕೋಬ 1:18; 1 ಪೇತ್ರ 1:23; ಮತ್ತಾಯ 13:3,23; ಲೂಕ 8:15). ಇದು ಜನರ ಜನರ ಹೃದಯದಲ್ಲಿ ಬಿತ್ತಲ್ಪಟ್ಟಿದೆ; ಇದು ಮೊಳಕೆಹೊಡೆಯುತ್ತದೆ ಮತ್ತು ಹೊಸ ಸ್ವಭಾವವನ್ನು ಉಂಟುಮಾಡುತ್ತದೆ.

*"ಆತನಲ್ಲಿ ನೆಲೆಗೊಂಡಿರುತ್ತಾನೆ"*– ವಿಶ್ವಾಸಿಗಳು ತಮ್ಮೊಳಗಿರುವ ದೇವರ ಬೀಜವು ಸತ್ತು ಹೋಗುತ್ತದೆಂದು ಅಥವಾ ಸೈತಾನನು ತೆಗೆದು ಹಾಕಿತ್ತಾನೆಂದು ಭಯಪಡಬೇಕಾಗಿಲ್ಲ ಮತ್ತು ದೇವರು ಪ್ರಾರಂಭಿಸಿದ ತನ್ನ ಕೆಲಸವನ್ನು ಮುಂದುವರಿಸುತ್ತಾನೆ (ಫಿಲಿಪ್ಪಿ 1:6; 2:13).

*"ಪಾಪಮಾಡುವವನಾಗಿರಲಾರನು"*– ಪಾಪದಲ್ಲಿ ಮುಂದುವರಿಯುವದು ವಿಶ್ವಾಸಿಯು ದೇವರಿಂದ ಹೊಂದಿದ ಹೊಸ ಸ್ವಭಾವಕ್ಕೆ ವಿರುದ್ಧವಾಗಿದೆ. ಈ ಹೊಸ ಸ್ವಭಾವವು ಪಾಪಮಾಡಲು ಸಾಧ್ಯವೇ ಇಲ್ಲ (ಎಫೆ 4:24), ಮತ್ತು ಅದು ಪಾಪದೊಂದಿಗೆ ಮತ್ತು ವಿಶ್ವಾಸಿಗಳಲ್ಲಿರುವ ಪಾಪ ಸ್ವಭಾವದೊಂದಿಗೆ ಹೋರಾಡಲು ದೇವರಾತ್ಮನೊಂದಿಗೆ ಕೂಡಿಕೊಳ್ಳುತ್ತದೆ (ಗಲಾ 5:17-18,24).

*"ದೇವರಿಂದ ಹುಟ್ಟಿದವನು"*– ಯೋಹಾನ 3:3-7. **10**

**3:10** ಪ್ರತಿಯೊಬ್ಬನು ದೇವರ ಮಕ್ಕಳು ಅಥವಾ ಸೈತಾನನ ಮಕ್ಕಳಾಗಿದ್ದಾರೆಂದು ಯೋಹಾನನು ಹೇಳುತ್ತಿದ್ದಾನೆ (ಯೋಹಾನ 8:44; ಮತ್ತಾಯ 13:38), ಮತ್ತು ಒಬ್ಬ ವ್ಯಕ್ತಿಯು ಮಾಡುವ ಅಥವಾ ಮಾಡದ ಕಾರ್ಯಗಳಿಂದ ಅವನು ಯಾರೆಂದು ನಾವು ಹೇಳಬಹುದು (ಮತ್ತಾಯ 7:15-20).

*"ನೀತಿಯನ್ನು ಅನುಸರಿಸಿ"*– ಸರಿಯಾದುದನ್ನು ಮಾಡುವದು ಸತ್ಯವೇದದಲ್ಲಿ ಬೋಧಿಸಿರುವದನ್ನು ಮಾಡುವುದಾಗಿದೆ, ಜನರು ಯಾವುದನ್ನು ಸರಿ ಎಂದು ಯೋಚಿಸುತ್ತಾರೋ ಅದನ್ನಲ್ಲ (ಯೋಹಾನ 16:2). ಸರಿಯಾದುದನ್ನು ಮಾಡದವರು ತಪ್ಪನ್ನು ಮಾಡುತ್ತಿದ್ದಾರೆ, ಬಹುಶಃ ಇದು ಅವರಿಗೆ ಗೊತ್ತಿರುವುದಿಲ್ಲ. ಮತ್ತು ಅವರು ಸರಿಯಾದದನ್ನು ಮಾಡಲು ಅಭ್ಯಾಸಿಸದಿದ್ದರೆ ಅವರು ಸೈತಾನನ ಮಕ್ಕಳು, ದೇವರ

ಮಕ್ಕಳಲ್ಲ.

*"ತನ್ನ ಸಹೋದರರನ್ನು ಪ್ರೀತಿಸುವವನು"*– ಯೇಸುವು ಕೊಟ್ಟ ಅಪ್ಪಣೆಗಳಲ್ಲಿ ಸರಿಯಾದದ್ದಾಗಿದೆ. "ಸಹೋದರ" ಇದು ವಿಶಾಲವಾದ ಅರ್ಥವನ್ನು ಹೊಂದಿದೆ – ಸಹ ವಿಶ್ವಾಸಿಗಳನ್ನು ಮತ್ತು ರಕ್ತವನ್ನು ಹಂಚಿಕೊಂಡ ಸಹೋದರರನ್ನೂ ಒಳಗೊಂಡಿದೆ (ವ.12 ರಂತೆ). **11**

**- 3:11** ಯೋಹಾನ 13:34; 15:12,17. **12**

**3:12** *"ಕಾಯಿನ"*– ಆದಿ 4:1-8; ಇಬ್ರಿ 11:4; ಯೂದ 11. ಕಾಯಿನನು "ದುಷ್ಟನಿಗೆ" –ಸೇರಿದವನು, ಸೈತಾನನು (ವ.10). ಹಾಬೇಲನು ದೇವರಿಗೆ ಸೇರಿದವನು ದೇವರು ಹೇಳಿದ್ದನ್ನು ಅವನು ಮಾಡಿದನು (ಇಬ್ರಿ 11:4). **13**

**3:13** ಯೋಹಾನ 15:18-21. ಕಾಯಿನನು ದೇವ ಜನರನ್ನು ದ್ವೇಷಿಸುವ ಲೋಕದ ಜನರಿಗೆ ಉದಾಹರಣೆಯಾಗಿದ್ದಾನೆ. **14**

**3:14** *"ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದ್ದೇವೆ"*– ಯೋಹಾನ 5:24 ನೋಡಿರಿ. ಇದನ್ನು ಅನುಭವಿಸಿದವರಲ್ಲಿ ಕಂಡುಬಂದ ದೊಡ್ಡ ಪುರಾವೆಗಳು ಯಾವುವು? ಸಹ ವಿಶ್ವಾಸಿಗಳ ಪ್ರೀತಿ. ವ.19; 2:3 ಹೋಲಿಸಿರಿ.

*"ಮರಣ"*– ಆತ್ಮೀಕ ಮರಣ (ಎಫೆ 2:1). ಪ್ರೀತಿ ಇಲ್ಲದ ಹೃದಯವನ್ನು ಹೊಂದಿರುವುದೇ ಇದರ ದೊಡ್ಡ ಪುರಾವೆಯಾಗಿದೆ. ಪ್ರೀತಿಯಾಗಿರುವ ದೇವರು ವಿಶ್ವಾಸಿಗಳೆಲ್ಲರ ಹೃದಯದಲ್ಲಿ ವಾಸಿಸುವನು ಮತ್ತು ಅವರು ಪ್ರೀತಿಸುವಂತೆ ಆತನು ಮಾಡುತ್ತಾನೆ. **15**

**3:15** ದ್ವೇಷವೆಂಬುದು ಕೊಲೆಗೆ ಸಮಾನವಾಗಿದೆ ಯಾಕಂದರೆ ಅದು ದ್ವೇಷಿಸುವ ವ್ಯಕ್ತಿಯನ್ನು ನಾಶಮಾಡುತ್ತದೆ. ದೇವರು ಹೃದಯದ ಭಾವನೆಯನ್ನು ಮತ್ತು ವ್ಯಕ್ತಿಯ ನಡವಳಿಕೆಯನ್ನು ನೋಡುವವನಾಗಿದ್ದಾನೆ. ಮತ್ತಾಯ 5:27-30.

*"ಕೊಲೆಗಾರ"*– ಒಬ್ಬ ಕೊಲೆಗಾರನು ಪಶ್ಚಾತ್ತಾಪ ಪಟ್ಟು ಕ್ರಿಸ್ತನನ್ನು ನಂಬುವದರ ಮೂಲಕ ನಿತ್ಯಜೀವವನ್ನು ಪಡೆಯಬಹುದು. ನಂತರ ಅವನು ದ್ವೇಷಿಸುವುದನ್ನು ನಿಲ್ಲಿಸುತ್ತಾನೆ ಮತ್ತು ಅವನು ಮಾಡಿದ ಕೊಲೆ ಕ್ಷಮಿಸಲ್ಪಡುತ್ತದೆ. **16**

**3:16** *"ಇಂಥದೆಂದು ನಮಗೆ ತಿಳಿದು ಬಂದಿದೆ"*– ಪ್ರೀತಿಯು ಏನೆಂಬುದನ್ನು ಪ್ರೀತಿಯ ಅವತಾರವಾದವನನ್ನು ಯೋಹಾನನು ಸೂಚಿಸುತ್ತಿದ್ದಾನೆ ಮತ್ತು ಪ್ರೀತಿಯಿಂದ ಆತನು ಮಾಡಿದ್ದನ್ನು ಮಾತಾಡುತ್ತಿದ್ದಾನೆ. ರೋಮಾ 5:8; ಗಲಾ 2:20; ಯೋಹಾನ 3:16; 10:11,15. ಸಹ ವಿಶ್ವಾಸಿಗಳಿಗಾಗಿ ಸಾಯಲು ವಿಶ್ವಾಸಿಗಳು ಸಿದ್ಧರಾಗಿರಬೇಕು. ಇದು ದೇವರು ತೋರಿಸುವ ಮತ್ತು ಬೋಧಿಸುವ ಪ್ರೀತಿಯ ಮಾನದಂಡವಾಗಿದೆ. ಬೇರೆ ಕ್ರೈಸ್ತರಿಗೆ ಸಹಾಯ ಮಾಡಲು ಬೆರಳನ್ನು ಸಹ ಎತ್ತದ ಅನೇಕ ಜನರು ತಾವು ಒಳ್ಳೆಯ ಕ್ರೈಸ್ತರೆಂದು ಯೋಚಿಸುವದು ಎಷ್ಟು ದುಃಖಕರವಾಗಿದೆ. ಮುಂದಿ ವಚನವು ತೋರಿಸುವುದನ್ನು ನೋಡಿದರೆ

ಎಷ್ಟು ದುಃಖ ಮತ್ತು ಅಪಾಯಕರವಾಗಿದೆ. **17-18**

**3:17-18** ಯಾಕೋಬ 2:14-17 ಹೋಲಿಸಿರಿ. ಕ್ರಿಯೆಗಳಿಲ್ಲದ ನಂಬಿಕೆಯು ಸತ್ತದ್ದಾಗಿದೆ. ಪ್ರೀತಿಯ ವಿಷಯವಾಗಿಯೂ ನಾವು ಹಾಗೆಯೇ ಹೇಳಬಹುದು. ಒಳ್ಳೆಯ ಕ್ರೀಯೆಗಳನ್ನು ಅಭ್ಯಾಸಿಸದ ಪ್ರೀತಿಯು ಪ್ರೀತಿಯೇ ಅಲ್ಲ. ಪ್ರೀತಿ ಎಂಬುದು ಮತ್ತೊಬ್ಬರಿಗೆ ಸಹಾಯ ಮಾಡದಿದ್ದರೆ ಅದು ಸುಳ್ಳು, ವಂಚನೆ ಮತ್ತು ಕೆಲಸಕ್ಕೆಬಾರದ ಪ್ರೀತಿಯಾಗಿದೆ. ಕ್ರಿಸ್ತನು ಲೋಕಕ್ಕೆ ನ್ಯಾಯತೀರಿಸುವುದಕ್ಕೆ ಬರುವಾಗ ತೀರ್ಪಿನ ಆಧಾರವು ಜನರು ಏನು ಮಾಡಿದ್ದಾರೆ ಮತ್ತು ಮಾಡಿಲ್ಲ, ಅವರು ಹೇಳಿದ ಒಳ್ಳೆಯ ಮಾತುಗಳು ಅಥವಾ ಅವರು ಭಾವಿಸಿದ ಉತ್ತಮ ಭಾವನೆಗಳನ್ನು ಆಧರಿಸಿರುವುದಿಲ್ಲ. ಮತ್ತಾಯ 25:31-46 (ವಚನಗಳು 41-46 ಇಲ್ಲಿನ ಯೋಹಾನನ ಮಾತುಗಳು ವಿಷೇಶವಾದ ಅರ್ಥವನ್ನು ಹೊಂದಿದೆ). ಖಂಡಿತವಾಗಿಯೂ, ನಿಜವಾದ ಪ್ರೀತಿಯನ್ನು ಹೊಂದಿರುವವರು ತಮಗಾಗಿ ಸ್ವಲ್ಪ ಲಾಭವನ್ನು ಪಡೆಯುವ ದೃಷ್ಟಿಯಿಂದ ಇತರರಿಗೆ ಸಹಾಯ ಮಾಡುವುದಿಲ್ಲ (ಅಂತಹ ಸಹಾಯವು ಮರೆಮಾಚುವ ಸ್ವಾರ್ಥವಾಗಿರುತ್ತದೆ). ನೀಡಿಕೆಯಲ್ಲಿರುವವರಿಗೆ ಅವರು ಸಹಾಯ ಮಾಡುತ್ತಾರೆ ಯಾಕಂದರೆ ಅವರಿಗೆ ಸಹಾಯಬೇಕಾಗಿದೆ. ಕೊಡುವುದರ ವಿಷಯವಾಗಿ ಟಿಪ್ಪಣಿ ಮತ್ತು ಉಲ್ಲೇಖಗಳಿಗಾಗಿ 2 ಕೊರಿಂಥ 9:15 ನೋಡಿರಿ. **19**

**3:19** ವಚನ 14. ನಾವು ನಮ್ಮ ಸಹ ಸಹೋದರರನ್ನು ಪ್ರೀತಿಸುತ್ತೇವೆಂದು ನಮಗೆ ತಿಳಿದಿದ್ದರೆ ಅವರಿಗೆ ಸಹಾಯ ಮಾಡುವಲ್ಲಿ ನಾವು ನಮ್ಮ ಪ್ರೀತಿಯನ್ನು ಸಾಬೀತುಪಡಿಸಿದ್ದೇವೆ, ಇದರಿಂದ ನಾವು ದೇವರ ಸತ್ಯಕ್ಕೆ ಸಂಬಂಧಸಿದವರೆಂಬ ಜ್ಞಾನವನ್ನು ನಮಗೆ ಕೊಡುತ್ತದೆ. ಮತ್ತು ದೇವರ ಸಮ್ಮುಖದಲ್ಲಿ ನಮಗೆ ವಿಶ್ರಾಂತಿ ಇದೆ. ಕೆಲವು ಕ್ರೈಸ್ತರು ರಕ್ಷಣೆಯ ಭರವಸೆಯನ್ನು ಹೊಂದದಿರುವದಕ್ಕೆ ಬಹುಶಃ ಇದು ಕಾರಣವಾಗಿರಬಹುದು: ಅವರು ತಮ್ಮ ಪ್ರೀತಿಯನ್ನು ಕರುಣೆ ಮತ್ತು ಸಹಾಯಕ ಕಾರ್ಯಗಳ ಮೂಕಲ ಕ್ರೀಯೆಯಲ್ಲಿ ಸಬೀತು ಪಡಿಸಿಲ್ಲ. **20**

**3:20** *"ದೋಷಿಗಳೆಂದು ನಿರ್ಣಯಿಸಿದರೂ"*– ಕೆಲವು ಸಾರಿ ವಿಶ್ವಾಸಿಗಳ ಹೃದಯಗಳು ಅವರನ್ನು ದೋಷಿಗಳೆಂದು ನಿರ್ಣಯಿಸುತ್ತದೆ. ಯಾಕಂದರೆ ಅವರು ಪಾಪಮಾಡಿರಬಹುದು (1:9; 2:1); ಅಥವಾ ಯಾಕಂದರೆ ಬಹುಶಃ ಎಷ್ಟು ಸ್ವಲ್ಪ ಪ್ರೀತಿಯು ಅವರಲ್ಲಿದೆ ಎಂಬುದು, ಅವರ ಜೀವಿತದಲ್ಲಿ ಪವಿತ್ರಾತ್ಮನ ಫಲಗಳ ಕೊರತೆ, ಅಥವಾ ಅವರು ಏನು ಮಾಡಬೇಕೋ ಅದನ್ನು ಅವರು ಮಾಡದಿರುವುದು. ಆದರೆ ನಾವು ಪ್ರೀತಿಮಾಡಿದರೆ ಮತ್ತು ಪ್ರೀತಿಯನ್ನು ಕ್ರಿಯೆಯಲ್ಲಿ ತೋರಿಸಿದ್ದರೆ ದೇವರ ಸಮ್ಮುಖದಲ್ಲಿ ನಮಗೆ ವಿಶ್ರಾಂತಿಯುಂಟು.

*"ದೇವರು . . . ಬಲ್ಲವನಾಗಿದ್ದಾನೆ"*– ಆತನು ಮಹತ್ವವುಳ್ಳವನು ಮತ್ತು ನಮ್ಮ ಎಲ್ಲ ಬಲಹೀನತೆ, ಸೋಲುಗಳು ಮತ್ತು ಪಾಪಗಳನ್ನು ಬಲ್ಲವನಾಗಿದ್ದಾನೆ ಮತ್ತು ಇನ್ನೂ

ನಮ್ಮನ್ನು ತಮ್ಮ ಪ್ರೀಯ ಮಕ್ಕಳನ್ನಾಗಿ ಸ್ವೀಕರಿಸುತ್ತಾನೆ ಮತ್ತು ಉನ್ನತ ಕಾರ್ಯಗಳಿಗೆ ನಮ್ಮನ್ನು ನಡೆಸುತ್ತಾನೆ. ಕೀರ್ತನೆ 103:8-14 ಹೋಲಿಸಿರಿ. **21**

**3:21** *"ನಮ್ಮ ಹೃದಯಗಳು ನಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ"*– ನಾವು ಪ್ರೀತಿಯಿಂದ ಮತ್ತು ಒಳ್ಳೆಯ ಕೆಲಗಳಿಂದ ತುಂಬಿರುವವರು ಮತ್ತು ಪಾಪದ ಮೇಲೆ ಜಯಹೊಂದಿರುವವರು ಆಗಿರುವಾಗ ನಮ್ಮ ಹೃದಯಗಳು ಮತ್ತು ಆತ್ಮಸಾಕ್ಷಿಯು ನಮ್ಮನ್ನು ನಿಂದಿಸುವುದಿಲ್ಲ.

*"ಭರವಸೆ"*– ಇದು ಸ್ವ-ನೀತಿಯ ಭರವಸೆಯಲ್ಲ ಆದರೆ ದೇವರು ನಮ್ಮೊಳಗಿದ್ದಾನೆ ಮತ್ತು ನಮ್ಮೊಳಗೆ ಕಾರ್ಯಮಾಡುತ್ತಾನೆಂಬ ಭರವಸೆ. **22**

- **3:22** ಯೋಹಾನ 14:13-15; 15:7.

*"ಆತನ . . ಮೆಚ್ಚಿಕೆಯಾದ ಕಾರ್ಯಗಳು"*– ನಾವು ಆತನಿಗೆ ವಿಧೇಯರಾಗದಿದ್ದರೆ ಅಥವಾ ಮೆಚ್ಚಿಸದಿದ್ದರೆ ನಮ್ಮಿಂದ ಪ್ರಾರ್ಥನೆಗಳಿಗೆ ದೇವರಿಂದ ಉತ್ತರವನ್ನು ಅಪೇಕ್ಷಿಸಬಾರದು. ಆತನು ನಮ್ಮ ಅವಿಧೇಯತೆ ಮತ್ತು ಸ್ವಯಂ-ಕೇಂದ್ರಿತ ಪ್ರಾರ್ಥನೆಗಳಿಗೆ ಉತ್ತರವನ್ನು ಮತ್ತು ಆಶೀರ್ವಾದದ ಪ್ರತಿಫಲವನ್ನು ಕೊಡುವುದಿಲ್ಲ. ದೇವರನ್ನು ಮೆಚ್ಚಿಸುವ ಕಾರ್ಯಗಳು ಪ್ರೀತಿ ಮತ್ತು ನಂಬಿಕೆಯ ಮೂಲಕ ಉಂಟಾಗುವ ಕಾರ್ಯಗಳಾಗಿವೆ (ಗಲಾ 5:6; ಇಬ್ರಿ 11:6). **23**

**3:23** *"ಹೆಸರು"*– ಯೋಹಾನ 1:12. **24**

- **3:24** ಯೋಹಾನ 14:20-23; 17:21-23.

*"ಬಲ್ಲೆವು"*– ವಚನಗಳು 14,19; 2:5; 4:13.

*"ಆತ್ಮನಿಂದ"*– ಪವಿತ್ರಾತ್ಮನು (ಯೋಹಾನ 14:16-17). ವಿಶ್ವಾಸಿಗಳಿಗೆ ತಾವು ದೇವರ ಮಕ್ಕಳೆಂಬ ಜ್ಞಾನವನ್ನು ಆತ್ಮನು ನೀಡುವನು – ರೋಮಾ 8:13-16.

*"ನಮಗೆ ಅನುಗ್ರಹಿಸಿದನು"*– 1 ಕೊರಿಂಥ 6:19; ಗಲಾ 4:6; ಎಫೆ 1:13-14.

# 4 1-6

**4:1-6** ಈ ವಚನಗಳಲ್ಲಿ ಜನರು ದೇವರ ಸತ್ಯತೆಗಳನ್ನುಹಿಂಬಾಲಿಸುತ್ತಿದ್ದಾರೋ ಇಲ್ಲವೋ ಎಂಬುದನ್ನು ತಿಳಿಯಲು ಯೋಹಾನನು ಎರಡು ಪರೀಕ್ಷಗಳನ್ನು ಕೊಡುತ್ತಾನೆ. ವಚನಗಳು 2,3 ಮೊದಲನೆಯದನ್ನು ಮತ್ತು ವ.6 ಎರಡನೆಯದನ್ನು ಕೊಡುತ್ತದೆ. **1**

**4:1** *"ಆತ್ಮದ ಎಲ್ಲಾ ನುಡಿಗಳನ್ನು ನಂಬದೆ"*– ದೇವರಾತ್ಮನು ಈ ಲೋಕದಲ್ಲಿದ್ದಾನೆ, ಆದರೆ ದುಷ್ಟ ಆತ್ಮಗಳು ಸಹ ಇದೆ. ಈ ದುಷ್ಟ ಆತ್ಮಗಳು ಸುಳ್ಳು ತತ್ವಗಳನ್ನು ಬೋಧಿಸುವಂತೆ ಪ್ರಚೋಧಿಸುತ್ತವೆ ಮತ್ತು ಅವರ ಮೂಲಕವೂ ಮಾತಾಡುತ್ತವೆ. 2 ಕೊರಿಂಥ 11:14-15; 1 ತಿಮೊ 4:1-3 ನೋಡಿರಿ. ಆದ್ದರಿಂದ ಸತ್ಯವನ್ನು ಬೋಧಿಸುತ್ತೇವೆನ್ನುವ ಎಲ್ಲಾ ವ್ಯಕ್ತಿಗಳನ್ನು, ಅಥವಾ ಜನರ ಮೂಲಕ ಮಾತನಾಡುವ ಎಲ್ಲಾ ಆತ್ಮಗಳನ್ನು

ನಂಬಬಾರದು.

"*ಸುಳ್ಳು ಪ್ರವಾದಿಗಳು*"– 2:18; 2 ಪೇತ್ರ 2:1. "ಅನೇಕ" ಎಂಬ ಪದವನ್ನು ಗಮನಿಸಿರಿ. **2-3**

**4:2-3** 2:22 ನೋಡಿರಿ. **2**

**4:2** "*ಮನುಷ್ಯನಾಗಿ*"– ಯೋಹಾನ 1:14; ಇಬ್ರಿ 2:14. ಇದನ್ನು ನಿರಾಕರಿಸಿದರೆ ಆತನ ನರಾವತಾರವನ್ನು, ಕನ್ಯೆಯಲ್ಲಿ ಹುಟ್ಟಿದ್ದನ್ನು, ಕ್ರಿಸ್ತನಲ್ಲಿರುವ ದೈವೀಕ ಮತ್ತು ಮಾನವ ಸ್ವಭಾವದ ಐಕ್ಯತೆಯನ್ನು ನಿರಾಕರಿಸಿದಂತಾಗುತ್ತಾದೆ – ಸ್ಪಷ್ಟವಾಗಿರುವ ಸತ್ಯವೇದದ ಎಲ್ಲಾ ಸತ್ಯಗಳನ್ನು. **3**

**4:3** "*ಒಪ್ಪದೆ ಇರುವ*"– ಯೇಸು ಕ್ರಿಸ್ತನು ಮನುಷ್ಯನಾಗಿ ಬಂದನು ಎಂಬುದನ್ನು ಅವರು ಬಹಿರಂಗವಾಗಿ ಹೇಳುವದಿಲ್ಲ. ಯೋಹಾನ 1:14 ರಲ್ಲಿರುವ ಸತ್ಯವನ್ನು ಅವರು ಬೋಧಿಸುವದಿಲ್ಲ. ಅವೆರಡನ್ನು ಬಹಿರಂಗವಾಗಿ ಅವರು ಅವರು ನಿರಾಕರಿಸುವುದಿಲ್ಲ. ಆದರೆ ಅವರು ಅದನ್ನು ಒಪ್ಪಿಕೊಳ್ಳುವಲ್ಲಿ ಅವರು ವಿಫಲರಾದ್ದರಿಂದ ಅವರು ಅದನ್ನು ನಂಬುವದಿಲ್ಲ ಎಂದು ತೋರಿಸಿಕೊಳ್ಳುತ್ತಾರೆ. ವಂಚಿಸುವವರನ್ನು ಮತ್ತು ಸುಳ್ಳು ಬೋಧಕರನ್ನು ಅವರು ಹೇಳದಿರುವವುಗಳಿಂದಲೂ ನಾವು ಗುರುತಿಸಬಹುದು ಬರಿ ಅವರು ಹೇಳುವ ಮಾತಿನಿಂದ ಮಾತ್ರವಲ್ಲ.

"*ಈಗಲೂ ಲೋಕದಲ್ಲಿ ಆದೆ*"– 2 ಥೆಸ 2:7 ಹೋಲಿಸಿರಿ. **4**

**4:4** "*ಜಯಿಸಿದ್ದೀರಿ*"– 2:13; 5:4. ವಿಶ್ವಾಸಿಗಳು ದೇವರಿಂದ ಆರಿಕೊಳಲ್ಪಟ್ಟವರಾಗಿದ್ದಾರೆ; ಅವರ ಹೊಸ ಆತ್ಮೀಕ ಜೀವಿತವು ದೇವರಿದ ಬಂದದ್ದಾಗಿದೆ ಅವರು ಸುಳ್ಳು ಬೋಧಕರನ್ನು ಅವರಿಂದ ಕಂಡುಹಿಡಿಯಲು ಮತ್ತು ಅವರ ಬೋಧನೆಗಳನ್ನು ನಿರಾಕರಿಸಲು ಅವರಿಂದ ಸಾಧ್ಯವಾಗುತ್ತದೆ.

"*ನಿಮ್ಮಲಿರುವಾತನು*"– ಯೇಸುವಿನ ಆತ್ಮನು (3:24; ರೋಮಾ 8:9-10).

"*ಲೋಕದಲ್ಲಿರುವಾತನು*"– ಸೈತಾನನು. ದುಷ್ಟ ಆತ್ಮಗಳಿಗಿಂತಲೂ ದೇವರಾತ್ಮನು ಹೆಚ್ಚಿನವನಾಗಿದ್ದಾನೆ. ಆದ್ದರಿಂದ ವಿಶ್ವಾಸಿಗಳು ಸೈತಾನನ್ನು ಜಯಿಸಬಹುದಾಗಿದೆ (ಯಾಕೋಬ 4:7; ಎಫೆ 6:10-13). **5**

**4:5** "*ಅವರು*"– ಸುಳ್ಳು ಬೋಧಕರು.

"*ಲೋಕ*"– 2:15-16. ರಕ್ಷಿಸಲ್ಪಡದವರು, ಆತ್ಮೀಕವಾಗಿ ಇಲ್ಲದ ಜನರು ಕೇಳಿಸಿಕೊಳ್ಳಲು ಇಷ್ಟಪಡುವುದನ್ನು ಸುಳ್ಳು ಪ್ರವಾದಿಗಳು ಬೋಧಿಸುತ್ತಾರೆ, ಆದ್ದರಿಂದ ಅವರು ಸ್ವೀಕರಿಸಲ್ಪಡುತ್ತಾರೆ (2 ತಿಮೊ 4:3). **6**

**4:6** ಇಲ್ಲಿ ಬಹು ಮುಖ್ಯವಾದ ಪರೀಕ್ಷೆ ಇದೆ.

"*ನಾವು*"– ಇಲ್ಲಿ ಯೋಹಾನನು ದೇವರ ವಾಕ್ಯದ ನಿಜ ಬೋಧಕರನ್ನು ಅರ್ಥೈಸುತ್ತಾನೆ,

ದೇವರಿಂದ ಕಳುಹಿಸಲ್ಪಟ್ಟವರು. ನಿಜವಾದ ವಿಶ್ವಾಸಿಗಳು (ದೇವರನ್ನು ತಿಳಿದುಕೊಂಡಿರುವವರು) ಅವರು ಹೇಳುವದನ್ನು ಕೇಳಿಸಿಕೊಳ್ಳಿರಿ, ದೇವರ ಮನುಷ್ಯರೆಂದು ಅವರನ್ನು ಗುರುತಿಸಿರಿ ಮತ್ತು ಅವರ ಬೋಧನೆಗಳಿಗೆ ವಿಧೇಯರಾಗಿರಿ (ಅಪೊ 2:42 ಹೋಲಿಸಿರಿ). ದೇವರ ಸತ್ಯಗಳನ್ನು ಬೋಧಿಸುವ ಬೋಧಕರನ್ನು ವಿಶ್ವಾಸಿಗಳು ಮತ್ತು ಬೋಧಕರು ದೇವರ ಮಕ್ಕಳನ್ನು ಗುರುತಿಸುತ್ತಾರೆ. ಪರೀಕ್ಷೆ ಮತ್ತು ಸಾಕ್ಷಿಯು ದೇವರು ಪ್ರಕಟಿಸಿದ ಸತ್ಯವನ್ನಾತುಕೊಂಡಿರುತ್ತದೆ. ಕ್ರಿಸ್ತನ ಸುವಾರ್ತೆಯು ಸತ್ಯವೇದದಲ್ಲಿ ದಾಖಲೆಯಾಗಿರುವ ರೀತಿಯಲ್ಲಿ ಯಾರು ಸ್ವೀಕರಿಸುವದಿಲ್ಲವೋ ಅವರು ಏನೇ ಯೋಚಿಸಿಕೊಂಡರೂ ಅವರು ದೇವರಿಂದ ಬಂದವರಲ್ಲ. **7-21**

**4:7-21** ಈ ವಚನಗಳು ಪ್ರೀತಿ ಎಂದರೆ ಏನೆಂದು ಪ್ರಕಟಿಸುತ್ತವೆ. ಪ್ರೀತಿ, ಪ್ರೀತಿಸುತ್ತಾನೆ ಎಂಬ ಪದಗಳು ನಾಮಪದ ಮತ್ತು ಕ್ರಿಯಾಪದಗಳಾಗಿವೆ ಇವು ಈ ವಚನಗಳಲ್ಲಿ 24 ಸಾರಿ ಕಾಣಿಸಿಕೊಳ್ಳುತ್ತವೆ. ಯೋಹಾನನ ವಿಷಯವೇನೆಂದರೆ: ದೇವರು ಪ್ರೀತಿಸ್ವರೂಪನು ಮತ್ತು ಇದನ್ನು ನಮಗೆ ಕಾರ್ಯರೂಪದಲ್ಲಿ ಸಾಕ್ಷ್ಯಯಾಗಿ ಮಾಡಿ ತೋರಿಸಿದ್ದಾನೆ, ಆದ್ದರಿಂದ ನಾವು ಪ್ರೀತಿಸುವ ಹಂಗಿನಲ್ಲಿದ್ದೇವೆ ಮತ್ತು ನಮ್ಮ ಪ್ರೀತಿಯನ್ನು ಕಾರ್ಯರೂಪದಲ್ಲಿ ಇತರರಿಗೆ ತೋರಿಸಬೇಕಾಗಿದೆ (3:18). **7**

**4:7** *"ಪ್ರೀತಿಸೋಣ"*– ಯೋಹಾನ 13:34. ನಿಜವಾದ ಪ್ರೀತಿಯ ಮೂಲವು ದೇವರಬಳಿಯಲ್ಲಿದೆ, ಮತ್ತು ಎಲ್ಲಾ ವಿಶ್ವಾಸಿಗಳು ದೇವರಿಂದ ಹುಟ್ಟಿದವರಾದ್ದರಿಂದ ಅವರು ಪ್ರೀತಿಸುವುದರಲ್ಲಿ ದೇವರಂತಿರಬೇಕು. ಇಲ್ಲಿ ಅವನು ಮಾತಾಡುತ್ತಿರುವ ಪ್ರೀತಿಯು ದೈವೀಕವಾದ ಪ್ರೀತಿಯಾಗಿದೆ (ಅಗಾಪೆ; 1 ಕೊರಿಂಥ 13:1 ಟಿಪ್ಪಣಿ ನೋಡಿರಿ). ಇದು ದೇವರಲ್ಲಿರುವ ಪ್ರೀತಿ ಮತ್ತು ಕ್ರಿಸ್ತನಲ್ಲಿರುವವರಿಗೆ ಆತನು ಇದನ್ನು ಕೊಡುವವನಾಗಿದ್ದಾನೆ (ಯೋಹಾನ 17:26). ಇದು ಲೋಕದಲ್ಲಿ ಇನ್ನ್ಯಾರ ಬಳಿಯು ಇಲ್ಲ. ಈ ಪ್ರೀತಿಯು ಲೋಕದ ಜನರು ತಮ್ಮ ಸ್ನೇಹಿತರಿಗೆ, ಮತ್ತು ಕುಟುಂಬಗಳಿಗೆ ತೋರಿಸುವ ಸ್ವಾಬಾವಿಕ ಪ್ರೀತಿಯಲ್ಲ. ಇದು ಲೈಂಗಿಕ ಪ್ರೀತಿಗೆ ಸಂಬಂಧಿಸಿದ್ದಲ್ಲ. ಇದು ನಿಸ್ವಾರ್ಥವಾದ ಪ್ರೀತಿ, ಸೇವೆ ಮಾಡಲು ಬಯಸುವ ಪ್ರೀತಿ ಮತ್ತು ಇತರರಿಗೆ ಆಶೀರ್ವಾದವನ್ನು ತರುವಂತದ್ದಾಗಿದೆ, ಆತ್ಮೀಕವಾಗಿ ಎಲ್ಲರಿಗೂ ಒಳ್ಳೆಯದನ್ನು ಬಯಸುವ ಪ್ರೀತಿಯಾಗಿದೆ. ನಮಗಾಗಿ ದೇವರು ತನ್ನ ಸ್ವಂತ ಕುಮಾರನನ್ನು ಕಳುಹಿಸಿಕೊಡುವುದರ ಮೂಲಕ ನಮಗೆ ಆತನ ಪ್ರೀತಿಯನ್ನು ಉತ್ತಮವಾಗಿ ತೋರಿಸಿಕೊಟ್ಟಿದ್ದಾನೆ (ವ.9; ರೋಮಾ 5:8). ಜನರಲ್ಲಿರುವ ಸ್ಪಷ್ಟವಾದ ಸಾಕ್ಷಿಯು ಏನೆಂದರೆ ಅವರು ಹೊಸದಾಗಿ ಹುಟ್ಟಿದವರು ಮತ್ತು ಅವರಲ್ಲಿರುವ ದೇವರನ್ನು ಬಲ್ಲವರಾಗಿದ್ದಾರೆ ಮತ್ತು ದೇವರ ಪ್ರೀತಿಯು ಅವರ ಹೃದಯದಲ್ಲಿದೆ. ಜನರು ಅದನ್ನು ಹೊಂದಿದ್ದರೆ, ಅವರು ಮಾಡುವ ಕಾರ್ಯದಲ್ಲಿ ಅದು ತೋರಿಸಲ್ಪಡುತ್ತದೆ. **8**

**4:8** *"ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ"*– ದೇವರ ವಿಷಯವಾಗಿ

ಅವರಿಗಿರುವ ಜ್ಞಾನ ಮತ್ತು ಜ್ಞಾನೋದಯದ ಬಗ್ಗೆ ಜನರು ಹೆಚ್ಚಳ ಪಡಬಹುದು, ಆದರೆ ಅವರಲ್ಲಿ ದೇವರ ಪ್ರೀತಿಯಿಲ್ಲದಿದ್ದರೆ, ಅವರು ತಮ್ಮನ್ನೇ ಮೋಸಪಡಿಸಿಕೊಳ್ಳುತ್ತಿದ್ದಾರೆ. ಅವರು ಅನೇಕ ರೀತಿಯ ಅತೀಂದ್ರಿಯ ಅನುಭವಗಳನ್ನು ಸ್ವಯಂ ತೃಪ್ತಿ ಭಾವನೆಗಳನ್ನು ಹೊಂದಿದ್ದರೂ, ಇವುಗಳು ಅವರನ್ನು ವಿಶ್ವಾಸಿಗಳನ್ನು ಕ್ರಿಸ್ತನಲ್ಲಿ ಪ್ರೀತಿಸಲು ನಡೆಸದಿದ್ದರೆ ಆ ಕಾರ್ಯಗಳೆಲ್ಲಾ ಸುಳ್ಳು ಮತ್ತು ಹುರುಳಿಲ್ಲದ್ದು ಮತ್ತು ವಂಚಿಸುವಂತದ್ದಾಗಿದೆ.

*"ದೇವರು ಪ್ರೀತಿಸ್ವರೂಪಿಯು"*– ವ.16 ಸಹ. ಇದು ದೇವರ ಸಾರ (ಅಸ್ತಿತ್ವ), ಆತನ ಸ್ವಭಾವ ಮತ್ತು ಆತನು ಪ್ರೀತಿಯನ್ನಲ್ಲದೆ ಬೇರೇನೂ ಮಾಡುವದಿಲ್ಲ. **9-10**

**4:9-10** ಯೋಹಾನ 3:16; ರೋಮಾ 5:8; ಎಫೆ 2:4-5. ದೈವಿಕವಾದ ಪ್ರೀತಿಯ ಮೂಲ ದೇವರಾಗಿದ್ದಾನೆ, ಮನುಷ್ಯನಲ್ಲ. ಪ್ರೀತಿ ಎಂದರೆ ಏನೆಂದು ದೇವರು ನಮಗೆ ತೋರಿಸದಿದ್ದಿದ್ದರೆ ನಮಗೆ ದೈವಿಕ ಪ್ರೀತಿ ಏನೆಂದು ತಿಳಿಯುತ್ತಿರಲಿಲ್ಲ. ಆತನು ನಮ್ಮನ್ನು ಪ್ರೀತಿಸದಿದ್ದಿದ್ದರೆ ಮತ್ತು ಆತನ ಪ್ರೀತಿಯನ್ನು ನಮ್ಮ ಹೃದಯದಲ್ಲಿ ಕೊಡದಿದ್ದಿದ್ದರೆ ನಾವು ಆತನನ್ನು ಪ್ರೀತಿಸುತ್ತಿರಲಿಲ್ಲ (ವ.19). **10**

**4:10** *"ಪಾಪನಿವಾರಣಾರ್ಥವಾಗಿ"*– 2:2 ಟಿಪ್ಪಣಿ ನೋಡರಿ. **11**

**4:11** ದೇವರು ಏನಾಗಿದ್ದಾನೋ ಮತ್ತು ಅವರು ಏನಾಗಿದ್ದಾನೋ ಆ ಕಾರಣದಿಂದಾಗಿ ವಿಶ್ವಾಸಿಗಳು ಒಬ್ಬರನ್ನೊಬ್ಬರು ಪ್ರೀತಿಸಬೇಕು. **12**

**4:12** *"ದೇವರನ್ನು ಯಾರೂ ಎಂದೂ ನೋಡಿಲ್ಲ"*– ಯೋಹಾನ 1:18; 1 ತಿಮೊ 6:16.

*"ದೇವರು ನಮ್ಮಲ್ಲಿ ನೆಲಗೊಂಡಿದ್ದಾನೆ"*– ಯೋಹಾನ 14:23; ರೋಮಾ 8:9. ಇದು ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಮಾತ್ರ ನಿಜವಾಗಿದೆ (ಎಫೆ 2:12; 4:18). ಈ ಕಾರ್ಯಕ್ಕೆ ಸಾಕ್ಷಿ ಏನೆಂದರೆ ಅವರು ಒಬ್ಬರನ್ನೊಬ್ಬರು ಪ್ರೀತಿಸುವುದಾಗಿದೆ. ದೇವರು ನಮ್ಮೊಳಗಿದ್ದರೆ, ಪ್ರೀತಿಯು ನಮ್ಮಲ್ಲಿರುತ್ತದೆ, ಮತ್ತು ದೇವರ ಪ್ರೀತಿ (ಅಗಾಪೆ) ನಮ್ಮಲ್ಲಿದ್ದರೆ, ದೇವರು ನಮ್ಮಲ್ಲಿದ್ದಾನೆ.

*". . . ಪ್ರೀತಿಯು ಸಿದ್ಧಿಗೆ ಬರುತ್ತದೆ"*– ದೇವರ ಜನರ ಒಬ್ಬರಿಗೊಬ್ಬರ ಪ್ರೀತಿಯ ಮೂಲಕ ದೇವರ ಪ್ರೀತಿಯು ಭೂಲೋಕವನ್ನು ತುಂಬಿದೆ. **13**

- **4:13** 3:24; ಯೋಹಾನ 17:21-23 ನೋಡಿರಿ. **14**

**4:14** 1:1-2 ನೋಡಿರಿ.

*"ಲೋಕ ರಕ್ಷಕ"*– 2:2; ಯೋಹಾನ 4:42; 1 ತಿಮೊ 4:10. **15**

**4:15** *"ಒಪ್ಪಿಕೊಂಡು"*– ಇದೇ ರೀತಿಯ ಪದವು ಕಾಣಿಸಿಕೊಂಡಿರುವುದನ್ನು 1:9 ರಲ್ಲಿ ನೋಡಿರಿ. ಯೇಸು ದೇವರ ಮಗನೆಂದು ಒಪ್ಪಿಕೊಳ್ಳುವದೆಂದರೆ ಆತನನ್ನು ಮತ್ತು ಆತನು ಹೇಳಿದ್ದನ್ನು ಮತ್ತು ನಾವು ಹೇಳಿದ್ದನ್ನು ನಂಬುವದು. ಆತನು ನಮಗೆ ತನ್ನನ್ನು ಪ್ರಕಟಿಸಿಕೊಂಡದ್ದರಿಂದ ಆತನು ದೇವರ ಮಗನೆಂದು ನಮಗೆ ತಿಳಿದದೆ. ಮತ್ತು ಈ ನಂಬಿಕೆಯು

ನಮ್ಮನ್ನು ದೇವರ ಬಳಿಗೆ ಮತ್ತು ಆತನ ಜೀವದೊಂದಿದೆ ನಮ್ಮನ್ನು ಜೋಡಿಸುತ್ತದೆ.

*"ದೇವರ ಕುಮಾರನು"*– ದೇವ ಕುಮಾರನಲ್ಲ. ಟಿಪ್ಪಣಿಗಾಗಿ ಮತ್ತಾಯ 3:17; ಯೋಹಾನ 3:16; 5:18-23. **16**

**4:16** ಆತನು ನಮ್ಮನ್ನು ಪ್ರೀತಿಸುತ್ತಾನೆಂದು ಹೇಳಿದ್ದರಿಂದ ಮಾತ್ರವಲ್ಲ, ಆದರೆ ಆತನು ತನ್ನ ಪ್ರೀತಿಯನ್ನು ಬಹಳ ಅದ್ಭುತವಾದ ಮಾರ್ಗದಲ್ಲಿ ಸಾಬೀತುಪಡಿಸಿದ್ದರಿಂದ ದೇವರ ಪ್ರೀತಿ ನಮಗೆ ತಿಳಿದಿದೆ (ವ.9; 3:16). ದೇವರು ತನ್ನ ಪ್ರೀತಿಯ ಬಗ್ಗೆ ಸಂಪೂರ್ಣವಾಗಿ ಮನವರಿಕೆಯಾಗುವ ಪುರಾವೆ ನೀಡಿದ್ದರಿಂದ ಆತನು ನಮ್ಮನ್ನು ಪ್ರೀತಿಸುತ್ತಾನೆಂಬುದನ್ನು ನಾವು ಎಂದಿಗೂ ಅನುಮಾನಿಸಬಾರದು. ಏನೇ ತೊಂದರೆ, ಸಂಕಟ ಅಥವಾ ನೋವು ನಮಗೆ ಬಂದರೂ ಅಥವ ನಾವು ಪ್ರೀತಿಸುವವರಿಗೆ ಬಂದರೂ, ನಾವು ದೇವರ ಪ್ರೀತಿಯನ್ನು ಆತುಕೊಳ್ಳಬಹುದು. ಅದು ಎಂದಿಗೂ ಬಿದ್ದುಹೋಗುವದಿಲ್ಲ, ಎಂದಿಗೂ ನಮ್ಮನ್ನು ಬಿಟ್ಟು ಹೋಗುವದಿಲ್ಲ (ಕೀರ್ತನೆ 23:6; ರೋಮಾ 8:35-39; 1 ಕೊರಿಂಥ 13:8). **17**

**4:17** *"ಸಿದ್ಧಿಗೆ"*– ವ.12.

*"ಹೆದರಿಕೆಯಿಲ್ಲ"*– 3:19,21; 2:28.

*"ನ್ಯಾಯತೀರ್ಪಿನ ದಿನದಲ್ಲಿ"*– ಮತ್ತಾಯ 10:15; 11:22,24; 2 ಕೊರಿಂಥ 5:10; 2 ಪೇತ್ರ 2:9; 3:7.

*"ನಾವು ಅಂಥವರಾಗಿಯೇ"*– ಕ್ರಿಸ್ತನ ಹಾಗೆ – ಯೋಹಾನ 17:14. ದೇವರು ವಿಶ್ವಾಸಿಗಳನ್ನು ತನ್ನ ಮಕ್ಕಳಂತೆ, ಆತನ ಜೀವವನ್ನು ಹೊಂದಿರುವವರಂತೆ, ಅವರಲ್ಲಿ ತನ್ನ ಪ್ರೀತಿ ಇರುವಂತೆ ತೀರ್ಪುಮಾಡುತ್ತಾನೆ. **18**

**4:18** ನ್ಯಾಯತೀರ್ಪಿನ ದಿನವು ನಮ್ಮ ಹೃದಯದಲ್ಲಿ ಭಯವನ್ನು ತರುತ್ತದೋ? ಹಾಗಾದರೆ ನಾವು ಯಾವ ರೀತಿಯಲ್ಲಿ ಪ್ರೀತಿಸಬೇಕೋ ಹಾಗೆ ನಾವು ಪ್ರೀತಿಸುತ್ತಿಲ್ಲ.

*"ಪೂರ್ಣಪ್ರೀತಿ"*– ಇದರ ಅರ್ಥ ಪರಿಪೂರ್ಣವಾದ ಮತ್ತು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ಪ್ರೀತಿ. ನಾವು ಇದನ್ನು ಕ್ರಿಸ್ತನ ಜೀವತದಲ್ಲಿ ಕಾಣುತ್ತೇವೆ ಮತ್ತು ನಾವು ಈ ಪ್ರೀತಿಯನ್ನು ತಿಳಿದುಕೊಳ್ಳಬೇಕು ಮತ್ತು ಇದನ್ನು ನಮ್ಮ ಜೀವಿತದಲ್ಲಿ ಹೊಂದಿರಬೇಕು (ಎಫೆ 3:16-19 ಹೋಲಿಸಿರಿ). ನಾವು ಹೊಂದಿದ್ದರೆ ದೇವರ ನ್ಯಾಯತೀರ್ಪಿಗೆ ಭಯಪಡಬೇಕಾಗಿಲ್ಲ. 2 ಕೊರಿಂಥ 5:6-9; ಫಿಲಿಪ್ಪಿ 1:21,23; 2 ತಿಮೊ 4:7-8 ನೋಡಿರಿ.

*"ಹೆದರಿಕೆಯನ್ನು ಹೊರಡಿಸಿಬಿಡುತ್ತದೆ"*– ದೇವರ ಭಯದ, ಆ ಭಕ್ತಿ ಗೌರವದ ಮತ್ತು ವಿಶ್ವಾಸಿಗಳ ಜೀವಿತದಲ್ಲಿರಬೇಕಾದ ವಿಸ್ಮಯದ ಬಗ್ಗೆ ಯೋಹಾನನು ಮಾತಾಡುತ್ತಿಲ್ಲ. (ಆದಿ 20:11; ಯೋಬ 28:28; ಕೀರ್ತನೆ 34:11-14; 86:11; 111:10; ಜ್ಞಾನೋ 1:7 ಟಿಪ್ಪಣಿ). ಇಲ್ಲಿ ಯೋಹಾನನು ಶಿಕ್ಷೆಯ ಭಯವನ್ನು, ನ್ಯಾಯತೀರ್ಪಿನ ದಿನದಲ್ಲಿ ದೇವರನ್ನು ಮುಖಾಮುಖಿಯಾಗಿ ಸಂಧಿಸಲು ಇರುವ ಭಯದ ಕುರಿತಾಗಿ ಮಾತಾಡುತ್ತಿದ್ದಾನೆ. **19**

**4:19** ವಚನ 10. ನಿಜವಾದ ಪ್ರೀತಿ ಏನೆಂಬುದನ್ನು ದೇವರು ತೋರಿಸಿದ್ದಾನೆ, ಮತ್ತು ಆತನ ಪ್ರೀತಿಯ ಮೂಲಕವಾಗಿ ನಮ್ಮನ್ನು ಆತನ ಮಕ್ಕಳನ್ನಾಗಿ ಮಾಡಿದ್ದಾನೆ ಮತ್ತು ಆತನ ಪ್ರೀತಿಯನ್ನು ನಮ್ಮೊಳಗಿಟ್ಟಿದ್ದಾನೆ. ರೋಮಾ 5:5 ಹೋಲಿಸಿರಿ. **20**

**4:20** 2:9; 3:14-15. ಇತರರನ್ನು ಪ್ರೀತಿಸದೆ ದೇವರನ್ನು ಪ್ರೀತಿಸಬಹುದೆಂದು ಜನರು ಕಲ್ಪಿಸಿಕೊಳ್ಳಬಹುದು, ಆದರೆ ಇದು ಅಸಾಧ್ಯವಾಗಿದೆ. ದೇವರು ತನ್ನ ಪ್ರೀತಿಯನ್ನು ನಮ್ಮಳೊಗಿಟ್ಟಿರುವದರಿಂದ ಮಾತ್ರವೇ ನಾವು ದೇವರನ್ನು ಪ್ರೀತಿಸುತ್ತೇವೆ, ಮತ್ತು ನಮ್ಮೊಳಗಿರುವ ಈ ದೈವಿಕ ಪ್ರೀತಿಯು ನಾವು ದೇವರನ್ನು ಪ್ರೀತಿಸಿದಂತೆಯೇ ಇತರರನ್ನು ನಾವು ಪ್ರೀತಿಸುವಂತೆ ಮಾಡುತ್ತದೆ. ದೇವರಿಗೆ ತೋರಿಸುವ ಮತ್ತು ಜನರಿಗೆ ತೋರಿಸುವ ನಿಜವಾದ ಪ್ರೀತಿಯನ್ನು ಬೇರ್ಪಡಿಸಲು ಸಾಧ್ಯವಿಲ್ಲ. **21**

**4:21** ಆತ್ಮೀಕ ಅವಶ್ಯಕತೆ ಏನು, ನಾವು ಕಾರ್ಯರೂಪದಲ್ಲಿ ತೋರಿಸಬೇಕೆಂದು ದೇವರು ಆಜ್ಞಾಪಿಸುತ್ತಾನೆ. ಆತನು ಕ್ರೀಯೆಯಲ್ಲಿ ತೋರಿಸಬೇಕಾದ ಪ್ರೀತಿಯ ಬಗ್ಗೆ ಮಾತಾಡುತ್ತಿದ್ದಾನೆ (3:16-18).

# 5 1

**5:1** *"ಯೇಸುವೇ ಕ್ರಿಸ್ತನು"*– 2:22; 3:23; 4:2. ಯೇಸುವೇ ಕ್ರಿಸ್ತನೆಂದು ಸ್ವೀಕರಿಸುವುದು ಯೇಸುವಿನ ಬಗ್ಗೆ ದೇವರು ಪ್ರಕಟಪಡಿಸಿದ ಸತ್ಯವನ್ನು ಸ್ವೀಕರಿಸುವುದು ಮತ್ತು ಆ ಸತ್ಯವನ್ನು ನಂಬುವುದಾಗಿದೆ. ಯೇಸು ಕ್ರಿಸ್ತನು ದೇವರು ನಮಗೆ ಕೊಟ್ಟ ಉಡುಗೊರೆ ಎಂಬುದು ನಿಜವಾದ ನಂಬಿಕೆಯಾಗಿದೆ (ಫಿಲಿಪ್ಪಿ 1:29; ಎಫೆ 2:8-9). ಅದನ್ನು ಹೊಂದಿರುವವರ ಮೇಲೆ ಅದು ತೀವ್ರ ಪರಿಣಾಮ ಬೀರುತ್ತದೆ (ಅಪೊ 2:36-42 ಹೋಲಿಸಿರಿ). ಖಂಡಿತವಾಗಿ, ಯೇಸು ಕ್ರಿಸ್ತನನ್ನು ನಂಬದೆಯೇ ನಂಬಿದ್ದೇವೆಂದು ಸುಮ್ಮನೆ ಹೇಳುವುದರಿಂದ ಯಾವುದೇ ಒಳ್ಳೆಯ ಪರಿಣಾಮವಿರುವದಿಲ್ಲ.

*"ದೇವರಿಂದ ಹುಟ್ಟಿದವನಾಗಿದ್ದಾನೆ"*– 2:29; ಯೋಹಾನ 1:12-13.

*"ಪ್ರೀತಿಸುತ್ತಾನೋ ಅವನು"*– ನಾವು ದೇವರನ್ನು ಪ್ರೀತಿಸಿದರೆ ದೇವರಿಂದ ಹುಟ್ಟಿದವರೆಲ್ಲರನ್ನು ನಾವು ಪ್ರೀತಿಸುತ್ತೇವೆ (4:20). **2**

**5:2** *"ತಿಳುಕೊಳ್ಳುತ್ತೇವೆ"*– ನಾವು ಜನರ ಬಗ್ಗೆ ಒಳ್ಳೆಯ ಭಾವನೆಗಳನ್ನು ಹೊಂದಿದ್ದೇವೆ ಮತ್ತು ಅವರಿಗೆ ಸಹಾಯ ಮಾಡುವುದರಿಂದ ನಾವು ಜನರನ್ನು ಪ್ರೀತಿಸುತ್ತೇವೆ ಎಂದು ನಮಗೆ ತಿಳಿದಿಲ್ಲವೇ? ಆತನ ವಾಕ್ಯಕ್ಕೆ ವಿಧೇಯತೆಯನ್ನು ತೋರಿಸುವ ಮೂಲಕ ನಮ್ಮ ಪ್ರೀತಿಯನ್ನು ದೇವರಿಗೆ ತೋರಿಸದಿದ್ದರೆ ಇದು ಪ್ರೀತಿಗೆ ಸಾಕ್ಷಿಯಾಗುವುದಿಲ್ಲ. ನಾವು ದೇವರನ್ನು ಪ್ರೀತಿಸುತ್ತೇವೆಂದು ತಿಳಿದಿದ್ದರೆ ನಾವು ಆತನ ಅಪ್ಪಣೆಗಳನ್ನು ಸಹ ಹೃದಯದಿಂದ ಪ್ರೀತಿಸುತ್ತೇವೆ, ನಾವು ದೇವರ ಮಕ್ಕಳನ್ನು ಪ್ರೀತಿಸುತ್ತೇವೆಂಬ ಭರವಸೆ ನಮಗಿರುತ್ತದೆ. **3**

- **5:3** ಯೋಹಾನ 17:15,21,23.

*"ಭಾರವಾದವುಗಳಲ್ಲ"*– ಅಥವಾ "ಕಷ್ಟಕರವಾದವುಗಳಲ್ಲ" – ಇದು ಇಬ್ರಿಯ ಭಾಷೆಯ ಮೂಲ ಅರ್ಥವಾಗಿದೆ. ಮತ್ತಾಯ 11:29-30 ಹೋಲಿಸಿನೋಡಿರಿ. **4**

**5:4** ದೇವರ ಅಪ್ಪಣೆಯು ವಿಶ್ವಾಸಿಗಳಿಗೆ ಭಾರವಾಗಿರುವುದಿಲ್ಲ ಯಾಕಂದರೆ ಅವರಲ್ಲಿ ದೇವರನ್ನು ಪ್ರೀತಿಸುವ ಹೊಸ ಸ್ವಭಾವವಿದೆ, ಮತ್ತು ದೇವರು ತಾನೆ ಅವರೊಳಗೆ ವಾಸಿಸುತ್ತಾನೆ (4:12).

*"ಯಾವನಾದರು"*– ಯಾರನ್ನೂ ಹೊರತುಪಡಿಸಿದೆ ಎಲ್ಲರೂ.

*"ಲೋಕವನ್ನು ಜಯಿಸುತ್ತದೆ"*– ಹೋಲಿಸಿರಿ 2:13-14; 4:4. ಕ್ರಿಸ್ತನನ್ನು ನಂಬುವುದರ ಮೂಲಕ ಮತ್ತು ಲೋಕದ ಪಾಪಗಳನ್ನು ಮತ್ತು ಮಾರ್ಗಗಳನ್ನು ಬಿಟ್ಟುಬಿಡುವುದರಿಂದ ವಿಶ್ವಾಸಿಗಳು ಲೋಕವನ್ನು ಜಯಿಸಲು ಪ್ರಾರಂಭಿಸುತ್ತಾರೆ. ದೇವರು ಅವರನ್ನು ಕರೆದು ಈ ಲೋಕದಿಂದ ತನ್ನ ಸ್ವಂತ ಜನರನ್ನಾಗಿ ಅವರನ್ನು ಬೇರ್ಪಡಿಸಿದ್ದಾನೆ (ಯೋಹಾನ 17:6,14,16). ನಂಬಿಕೆಯು ಲೋಕದ ಮೇಲೆ ಜಯವನ್ನು ಹೊಂದುತ್ತದೆ ಯಾಕಂದರೆ ಅದು ನಮ್ಮನ್ನು ಲೋಕವನ್ನು ಜಯಿಸಿದ ಮಹಾ ಜಯವೀರನಾದ ಕ್ರಿಸ್ತನೊಂದಿಗೆ ಬಂಧಿಸುತ್ತದೆ (ಯೋಹಾನ 16:33). **5**

**5:5** 4:15 ನೋಡಿರಿ.

*"ನಂಬಿದವರೇ"*–ಜನರು ತಪ್ಪಸ್ಸನ್ನು ಅಭ್ಯಾಸಮಾಡುವುದರ ಮೂಲಕ ಅಥವಾ ಲೋಕದಿಂದ ದೂರವಿರುವುದರ ಮೂಲಕ ಲೋಕವನ್ನು ಜಯಿಸಲು ಪ್ರಯತ್ನಿಸುತ್ತಾರೆ. ಇದು ಲೋಕವನ್ನು ಜಯಿಸಿದಂತಾಗುವುದಿಲ್ಲ ಬದಲಿಗೆ ಲೋಕದಿಂದ ಓಡಿಹೋಗುವುದಾಗಿದೆ. ಇದು ಕೆಲಸಕ್ಕೆ ಬಾರದು. ಈ ವಿಧಾನವನ್ನು ಅನುಸರಿಸುವವರು ಲೋಕವನ್ನು ತಮ್ಮೊಂದಿಗೆ ತಮ್ಮ ಹೃದಯಗಳಲ್ಲಿ ತೆಗೆದುಕೊಂಡು ಹೋಗುತ್ತಾರೆ ಮತ್ತು ಅವರು ಮಾಡುತ್ತಿರುವದೇನೆಂದರೆ ಲೋಕದ ಸ್ವಲ್ಪ ಭಾಗವನ್ನು ಜಯಿಸಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ಜಯಿಸುವುದರ ಬಗ್ಗೆಯ ಟಿಪ್ಪಣಿಗಾಗಿ ಪ್ರಕ 2:7 ನೋಡಿರಿ. **6**

**5:6** ಮತ್ತಾಯ 3:13-17; 26:28; ಯೋಹಾನ 19:34. ಸತ್ಯವೇದದಲ್ಲಿ ಕೆಲವು ಸಾರಿ ನೀರು ಆತ್ಮಿಕ ಜೀವಿತದ ಮತ್ತು ದೇವರಾತ್ಮನ ಚಿನ್ಹೆಯಾಗಿದೆ (ಯೋಹಾನ 4:10,14; 7:38-39). ರಕ್ತವು ಪಾಪದ ಪ್ರಾಯಶ್ಚಿತ್ತದ ಬಗ್ಗೆ, ಕ್ಷಮಾಪಣೆಯ ಮತ್ತು ಶುದ್ದೀಕರಣದ ಬಗ್ಗೆ ಮಾತಾಡುತ್ತದೆ (1:7; ಎಫೆ 1:7). ಕ್ರಿಸ್ತನು ದೇವರಾತ್ಮನಿಂದ ಹುಟ್ಟಿದನು, ಆತ್ಮನಿಂದ ಅಭಿಷೇಕಿಸಲ್ಪಟ್ಟವನು, ಸಂಪೂರ್ಣ ಆತ್ಮಿಕ ಜೀವಿತದಿಂದ ತುಂಬಿದವನು, ಮತ್ತು ಬೇರೆಯವರಿಗೆ ಆತ್ಮಿಕ ಜೀವಿತದ ಮೂಲನಾದವನು, ಮತ್ತು ನಮ್ಮ ಪಾಪಗಳಿಗಾಗಿ ತನ್ನ ಪ್ರಾಣವನ್ನು ಕೊಡುವುದರೊಂದಿಗೆ ತನ್ನ ಇಹ ಲೋಕ ಜೀವಿತವನ್ನು ಮುಗಿಸಿದನು.

*"ಆತ್ಮನು ಸಾಕ್ಷಿಕೊಡುವವನಾಗಿದ್ದಾನೆ"*– ಯೋಹಾನ 15:26; 16:13-15. ದೇವರಾತ್ಮನು

ಎಲ್ಲಾಕಡೆಯಲ್ಲಿಯೂ ಈ ಯುಗದುದ್ದಕ್ಕೂ ನಿರಂತರವಾಗಿ ಇದನ್ನು ಮಾಡುವವನಾಗಿದ್ದಾನೆ "ಆತ್ಮನು ಸತ್ಯ ಸ್ವರೂಪನೇ" – ಯೋಹಾನ 14:6,17; ಕೀರ್ತನೆ 31:5; ತೀತ 1:2. **7-8**

**5:7-8** ಈ ವಚನಗಳ ಕೆಲವು ಭಾಗ – "ಪರಲೋಕದಲ್ಲಿ, ತಂದೆ, ವಾಕ್ಯ ಮತ್ತು ಪವಿತ್ರಾತ್ಮ ಈ ಮೂವರು ಒಂದೇಯಾಗಿದ್ದಾರೆ. ಮತ್ತು ಭೂಲೋಕದಲ್ಲಿ ಸಾಕ್ಷಿಕೊಡಲು ಮೂವರಿದ್ದಾರೆ" ಎಂಬುದು ಈಗ ದೊರೆತಿರುವ ಹಿಂದಿನ ಗ್ರೀಕ್ ಮೂಲ ಪ್ರತಿಗಳಲ್ಲಿ ಇದು ಕಾಣೆಯಾಗಿದೆ, ಆದರೆ ಎರಾಮಸ್ ಎಂಬ 16ನೇ ಶತಮಾನದ ಗ್ರೀಕ್ ಪಂಡಿತನು, ಇದನ್ನು ಗ್ರೀಕ್ ವಾಕ್ಯಗಳಲ್ಲಿ ಸೇರಿಸಿ ಪ್ರಕಟಿಸಿದನು ಮತ್ತು ಆದ್ದರಿಂದ ಇದು ಕಿಂಗ್ ಜೇಮ್ಸ್ ಸತ್ಯವೇದದ ಭಾಷಾಂತರದಲ್ಲಿ ಸೇರಿಸಲಾಗಿದೆ. ಇದು ಗ್ರೀಕ್ ಭಾಷೆಯ ಮೂಲ ಪ್ರತಿಯಲ್ಲಿ ಇಲ್ಲದಿರಲು ಅಸಾಧ್ಯವಾಗಿರಲಿಲ್ಲ, ಎಂದು ಈ ವಿಷಯದ ಬಗ್ಗೆ ಎಲ್ಲಾ ಅಧಿಕಾರಿಗಳು ಯೋಚಿಸುವುದು ಅಸಂಭವವಾಗಿದೆ. ಅದು ಏನೇ ಆಗಿದ್ದರೂ, ಈ ವಾಕ್ಯಗಳ ಸತ್ಯವನ್ನು ಹೊಸ ಒಡಂಬಡಿಕೆಯ ಎಲ್ಲಾ ಕಡೆಗಳಲ್ಲಿ ಬೋಧಿಸುವದನ್ನು ನೋಡುತ್ತೇವೆ. ಟಿಪ್ಪಣಿಗಾಗಿ ಮತ್ತಾಯ 3:16-17 ನೋಡಿರಿ. **8**

**5:8** ಕ್ರಿಸ್ತನ ಜೀವಿತ ಮತ್ತು ಮರಣದ ವಿಷಯಗಳನ್ನು ಬರೆದಿರುವವರು ಸಾಕ್ಷಿಗಳಂತಿದ್ದಾರೆ. ಅವರ ಮೂಲಕವೂ ಸಹ ದೇವರಾತ್ಮನು ಮಾತಾಡುತ್ತಾನೆ. ಈ ಮೂವರು ಸಂಪೂರ್ಣವಾದ ಒಪ್ಪಂದದಲ್ಲಿದ್ದಾರೆ. ಒಳಗಿನ ಸಾಕ್ಷಿಯು ಹೊರಗಿರುವ ಸಾಕ್ಷಿಯನ್ನೇ ಹೇಳುತ್ತದೆ. ವಿಶ್ವಾಸಿಯ ಅನುಭವ ಮತ್ತು ಸತ್ಯವೇದವು ಇದನ್ನು ಒಪ್ಪಿಕೊಳ್ಳುತ್ತದೆ. **9**

**5:9** *"ಮನುಷ್ಯರ ಸಾಕ್ಷಿ"*– ಯೋಹಾನ 8:17 ಹೋಲಿಸಿರಿ. ನಾವು ಅನೇಕ ಸಂಗತಿಗಳನ್ನು ಮನುಷ್ಯರು ಹೇಳುವುದರಿಂದ ನಂಬುತ್ತೇವೆ. ಹಾಗಾದರೆ ನಾವು ಇದೆಲ್ಲದಕ್ಕಿಂತಲೂ ಹೆಚ್ಚಾಗಿ ದೇವರು ತಾನೇ ಸಾಕ್ಷಿಯಾಗಿರುವದನ್ನು ನಂಬಬಾರದೇ? ನೀರು, ರಕ್ತ ಮತ್ತು ಆತ್ಮ (ವಚನಗಳು 6,8) ಇವು ಕ್ರಿಸ್ತನ ವಿಷಯವಾಗಿ ದೇವರ ಸಾಕ್ಷಿಯಾಗಿದೆ. ಈ ಎರಡು ಕಾರ್ಯಗಳನ್ನು ಸುವಾರ್ತೆಯಲ್ಲಿ ದಾಖಲಿಸವಾಗಿದೆ; ದೇವರಾತ್ಮನು ಸತ್ಯವೇದದ ವಾಕ್ಯಗಳಲ್ಲಿ (ಆತನು ಪ್ರೇರೇಪಿಸಿದ) ನಮ್ಮ ಮನಸ್ಸು ಮತ್ತು ಹೃದಯ ಇವೆರಡರಲ್ಲಿಯೂ ಸಾಕ್ಷಿಯಾಗಿದ್ದಾನೆ.

*"ದೇವರ ಸಾಕ್ಷಿ""*– ಯೋಹಾನ 5:36-37; 8:18 ಹೋಲಿಸಿರಿ. ಹೊಸ ಒಡಂಬಡಿಕೆಯಲ್ಲಿ ನಮಗೆ ಈ ಸಾಕ್ಷಿಯುಂಟು, ಇಡೀ ಸತ್ಯವೇದವು ಕ್ರಿಸ್ತನ ವಿಷಯವಾಗಿ ದೇವರ ಸಾಕ್ಷಿಯಾಗಿದೆ ಎಂದು ನಾವು ಹೇಳಬಹುದು. **10**

**5:10** ನಾವು ಕ್ರಿಸ್ತನನ್ನು ನಂಬಿದಾಗ ನಾವು ನಮ್ಮೊಳಗೆ ಆತನ ಬಗ್ಗೆ ಲಿಖಿತ ದಾಖಲೆಯು ನಿಜವೆಂದು ಅಂತರಿಕವಾಗಿ ಮನವೊಲಿಸುತ್ತದೆ. ಇದು ದೇವರಾತ್ಮನಿಂದ ಹುಟ್ಟಿದ್ದಾಗಿದೆ.

*"ಸುಳ್ಳುಗಾರ"*– 1:10. ದೇವರು ಹೇಳಿದ್ದನ್ನು ನಂಬದಿರುವುದು ಗಂಭೀರವಾದ ಅವಮಾನ

ಮತ್ತು ಆತನನ್ನು ಅಗೌರವಿಸಿದಂತಾಗುತ್ತದೆ. **11**

**5:11** *"ನಿತ್ಯಜೀವ"*– ಯೋಹಾನ 3:16,36; 6:47; 17:2.

*"ಆತನ ಮಗನಲ್ಲಿ"*– ವ. 20; 1:2; ಯೋಹಾನ 11:25-26; 14:6; ಕೊಲೊ 3:4. **12**

**5:12** ನಿತ್ಯಜೀವ, ಒಬ್ಬ ವ್ಯಕ್ತಿಯಿಂದ ಮಾತ್ರ ಆತ್ಮಿಕ ಜೀವಿತವನ್ನು ಹೊಂದಲು ಸಾಧ್ಯ – ಯೇಸು ದೇವರ ಮಗನು. ಆತನನ್ನು ನಾವು ನಮ್ಮೊಳಗೆ ಹೊಂದಿರದಿದ್ದರೆ ನಾವು ಆತ್ಮಿಕವಾಗಿ ಸತ್ತವರಾಗಿದ್ದೇವೆ (ಎಫೆ 4:18). ಮತ್ತು ಬೇರೆ ಯಾವ ಮಾರ್ಗದಿಂದಲೂ ದೇವರಿಂದ ನಾವು ಆತ್ಮಿಕ ಜೀವಿತವನ್ನು ಹೊಂದಲು ಸಾಧ್ಯವಿಲ್ಲ (ಯೋಹಾನ 3:36). ಅದರ ಒಂದೇ ಒಂದು ಮೂಲವಾದವನನ್ನು ನಿರಾಕರಿಸಿದರೆ ನಾವು ಅದನ್ನು ಹೊಂದಿಕೊಳ್ಳಲು ಹೇಗೆ ಸಾಧ್ಯ?

*"ಉಂಟು"*– ವಿಶ್ವಾಸಿಗಳಿಗೆ ನಿತ್ಯಜೀವವು ಪ್ರಸ್ತುತ ಆಸ್ತಿಯಾಗಿದೆ (ಯೋಹಾನ 3:36; 5:24). **13**

**5:13** ಕ್ರಿಸ್ತನಲ್ಲಿರುವ ವಿಶ್ವಾಸಿಗಳು ತಮ್ಮ ರಕ್ಷಣೆಯ ಬಗ್ಗೆ ಅನುಮಾನ ಪಡಬಾರದೆಂದು ಇಚ್ಛಿಸುತ್ತಾನೆ. ಅವರಿಗೆ ನಿತ್ಯಜೀವವಿದೆ ಮತ್ತು ಅದು ಅವರಿಗಿದೆ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಈ ಪತ್ರಿಕೆಯನ್ನು ಬರೆಯುವಂತೆ ದೇವರು ಯೋಹಾನನ್ನು ಪ್ರೇರಿಪಸಿದ ಒಂದು ಕಾರಣ ಇದಾಗಿದೆ. ರಕ್ಷಣೆಯನ್ನು ಹೊಂದಿದ್ದೇವೆಂದು ವಿಶ್ವಾಸಿಗಳು ಹೇಗೆ ಖಚಿತವಾಗಿ ಹೇಳಬಹುದು? ಇದಕ್ಕೆ ಯಾವ ಸಾಕ್ಷಿ ಇದೆ, ಯೋಹಾನನು ಸೂಚಿಸುವ ಚಿನ್ಹೆಗಳಾವವು? ರಕ್ಷಣೆಯ ಭರವಸೆಯು ಈ ಕೆಳಗಿನವುಗಳಿಂದ ಬರುತ್ತದೆ: ದೇವರ ಸಾಕ್ಷಿಯನ್ನು ಆತನ ವಾಕ್ಯದಲ್ಲಿ ನಂಬುವುದರ ಮೂಲಕ (ವ.9,11) ನಮ್ಮೊಳಗಿರುವ ದೇವರಾತ್ಮನ ಸಾಕ್ಷಿಯ ಮೂಲಕ (ವ.10;3:24) ಪಾಪಕ್ಷಮಾಪಣೆಯ ವಾಗ್ದಾನದ ಮೇಲೆ ಆತುಕೊಳ್ಳುವದರ ಮೂಲಕ (1:7-9) ದೇವರಿಗೆ ವಿಧೇಯರಾಗುವುದರ ಸಾಕ್ಷಿಯ ಮೂಲಕ (2:5; 5:2) ಸರಿಯಾದ ಜೀವಿತವನ್ನು ಜೀವಿಸುವ ಸಾಕ್ಷಿಯ ಮೂಲಕ (2:29; 3:6,10) ನಮ್ಮ ಜೀವಿತದಲ್ಲಿ ತೋರುವ ಪ್ರೀತಿಯ ಫಲಗಳ ಸಾಕ್ಷಿಯ ಮೂಲಕ (3:14,18,19; 4:12). ವಿಶ್ವಾಸಿಗಳಿಗೆ ಭರವಸೆಯನ್ನು ಕೊಡುವ ಸತ್ಯದ ಬಗ್ಗೆಯೂ ಯೋಹಾನನು ಹೇಳಿಕೆಯನ್ನು ಕೊಡುತ್ತಾನೆ (4:15; 5:1). ರಕ್ಷಣೆಯ ಸಂಪೂರ್ಣ ಭರವಸೆಯು ಮೂರು ಕಾರ್ಯದ ಮೇಲೆ ಆಧರಿಸಿದೆ – ಬರೆಯಲ್ಪಟ್ಟಿರುವ ದೇವರ ವಾಕ್ಯ ವಿಶ್ವಾಸಿಗಳ ಅಂತರಿಕ ಅನಭವ ಅವರು ಹೇಗೆ ಜೀವಿಸುತ್ತಾರೆ ಮತ್ತು ಪ್ರೀತಿಸುತ್ತಾರೆ ಎಂಬ ಹೊರಗಿನ ಸಾಕ್ಷಿ. **14-15**

**5:14-15** ವಿಶ್ವಾಸಿಗಳಿಗೆ ನಿತ್ಯಜೀವವು ಇರುವುದರಿಂದ ಅವರು ದೇವರ ಸನ್ನಿಧನಕ್ಕೆ ಬರಲು ಬೇಕಾದ ಭರವಸೆಯನ್ನು ಹೊಂದಬಹುದು. (ರೋಮಾ 5:2; ಎಫೆ 2:18; 3:12; ಇಬ್ರಿ 4:16; 10:19-22). ನಮ್ಮ ಭರವಸೆಯು ಇದಾಗಿದೆ: ದೇವರ ಚಿತ್ತದ ಪ್ರಕಾರ ನಮ್ಮ ಪ್ರಾರ್ಥನೆಗಳಿದ್ದರೆ ದೇವರು ನಮ್ಮ ಅವುಗಳನ್ನೆಲ್ಲಾ ಕೇಳಿಸಿಕೊಳ್ಳುತ್ತಾನೆ, ಮತ್ತು ನಾವು ಬೇಡಿಕೊಂಡದ್ದನ್ನು ನಮಗೆ ಕೊಡುತ್ತಾನೆ. ದೇವರನ್ನು ನಮ್ಮ ಚಿತ್ತದ ಪ್ರಕಾರ

ಬೇಡಿಕೊಳ್ಳುವುದು ಬೇರೆ ವಿಷಯವಾಗಿದೆ. ಆ ರೀತಿಯ ಪ್ರಾರ್ಥನೆಗಳಿಗೆ ನಾವು ಉತ್ತರವನ್ನು ನಿರೀಕ್ಷಿಸಬಾರದು. ವಿಶ್ವಾಸಿಗಳ ಮುಖ್ಯ ಕಾಳಜಿ ಏನಾಗಿರಬೇಕೆಂದು ಮತ್ತಾಯ 6:10 ಕೊಡುತ್ತದೆ. ಆದರೆ ದೇವರ ಚಿತ್ತವೇನೆಂದು ತಿಳಿದುಕೊಳ್ಳುವುದು ಹೇಗೆ? ಸಂಪೂರ್ಣ ಸತ್ಯವೇದವು ಇದನ್ನು ಪ್ರಕಟಿಸುತ್ತದೆ. ನಾವು ಸತ್ಯವೇದದ ವಿಶಯವಾಗಿ ಅಜ್ಞಾನವುಳ್ಳವರಾಗಿದ್ದರೆ ನಾವು ದೇವರ ಚಿತ್ತವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ ನಾವು ಅದನ್ನು ಅಭ್ಯಾಸಿಸಿದರೆ ಆತನು ನಾವು ನಂಬಿಕೆಯಿಂದ ಮಾಡಿದ ಪ್ರಾರ್ಥನೆಗಳಿಗೆ ಉತ್ತರಿಸಲು ಇಚ್ಛಿಸುತ್ತಾನೆಂದು ನೋಡಬಹುದಾಗಿದೆ (ಯಾಕೋಬ 1:6-7 ಹೋಲಿಸಿರಿ). **16**

**5:16** ಪಾಪಮಾಡುವ ಇತರರಿಗೆ ಪ್ರಾರ್ಥಿಸುವುದು ವಿಶ್ವಾಸಿಗಳ ಕರ್ತವ್ಯವಾಗಿದೆ. ಯಾಕೋಬ 5:16 ಹೋಲಿಸಿರಿ.

*"ಮರಣಕರವಲ್ಲದ ಪಾಪ"*– ಯಾಕೆ ಕೆಲವು ಪಾಪಗಳು ಮರಣಕ್ಕೆ ನಡೆಸುವದಿಲ್ಲ ? ಯಾಕಂದರೆ ದೇವರು ಅವುಗಳನ್ನು ಕ್ಷಮಿಸುತ್ತಾನೆ ಮತ್ತು ಅವುಗಳನ್ನು ಒಪ್ಪಿಕೊಳ್ಳುವಾಗ ಅದು ಕ್ಷಮಿಸಲ್ಪಡುತ್ತದೆ (1:9). "ಮರಣಕರವಾದ" ಪಾಪ ಯಾವುದು? ಯೋಹಾನನು ಇದನ್ನು ವಿವರಿಸದ ಕಾರಣ ಇದರ ವಿಷಯವಾಗಿ ನಾವು ತುಂಬಾ ತಾತ್ತ್ವಿಕವಾಗಿ ಮಾತಾಡಬಾರದು. ಇದು ಈ ಸಾಮ್ಯದ ಅರ್ಥ: ದೇವರು ಕ್ಷಮಿಸದ ಪಾಪ. ಮತ್ತಾಯ 12:31-32; ಇಬ್ರಿ 2:3; 6:4-6; 10:26-31; 12:25 ನೋಡಿರಿ. ಯಾರು ತಿಳಿದು, ಉದ್ದೇಶಪೂರ್ವಕವಾಗಿ, ಬೇಕೆಂದು ಕ್ರಿಸ್ತನನ್ನು ಮತ್ತು ಸುವಾರ್ತೆಯನ್ನು ನಿರಾಕರಿಸುತ್ತಾರೋ ಮತ್ತು ಅವುಗಳನ್ನು ಮಾಡುತ್ತಲೇ ಇರುತ್ತಾರೋ ಅಂತವರನ್ನು ಕ್ಷಮಿಸಿಲು ದೇವರಿಗೆ ಅಸಾಧ್ಯವಾಗುತ್ತದೆ. ಈ ಪಾಪವನ್ನು ವಿಶ್ವಾಸಿಗಳು ಮಾಡಬಹುದೆಂದು ಯೋಹಾನನು ಹೇಳುವದಿಲ್ಲ. ಖಂಡಿತವಾಗಿ, ಅವರು ಇದನ್ನು ಮಾಡಲು ಸಾಧ್ಯವಿಲ್ಲವೆಂದು 3:6,9 ಬೋಧಿಸುತ್ತದೆ. **17**

**5:17** 3:4 ನೋಡಿರಿ. ಮರಣಕ್ಕೆ ನಡೆಸುವ ಪಾಪವಿಲ್ಲವೆಂದ ಮಾತ್ರಕ್ಕೆ ಪಾಪಮಾಡುವುದನ್ನು ಉತ್ತೇಜಿಸಬಾರದು, ಆದರೆ ನಾವು ಪಾಪ ಮಾಡಿದರೆ ಕ್ಷಮಾಪಣೆಯ ನಿರೀಕ್ಷೆಯನ್ನು ಕೊಡಬೇಕು. **18**

**5:18** *"ಪಾಪಮಾಡುವವನಲ್ಲ"*– 3:6. ಈ ವಚನದ ಅನೇಕ ಅನುವಾದಕರು, "ದೇವರಿಂದ ಹುಟ್ಟಿದವರು" ವಿಶ್ವಾಸಿಗಳನ್ನು ಮತ್ತು "ದೇವರಿಂದ ಹುಟ್ಟಿದವನು" –ಕರ್ತನಾದ ಯೇಸುವನ್ನು ಸೂಚಿಸುತ್ತದೆಂದು ನಂಬುತ್ತಾರೆ. ಪವಿತ್ರಾತ್ಮನ ಮೂಲಕ ಕನ್ಯೆಯಲ್ಲಿ ಆತನು ದೈಹಿಕವಾಗಿ ಹುಟ್ಟಿದನು (ಮತ್ತಾಯ 1:21; ಲೂಕ 1:35; ಗಲಾ 4:4). ಮರಣದಿಂದ ಆತನ ಪುನುರುತ್ಥಾನವು ಹುಟ್ಟಿದಂತಿತ್ತು (ಅಪೊ 13:33; ಇಬ್ರಿ 1:5). ಮತ್ತು ಆತನಲ್ಲಿ ಜೀವವು ನಿತ್ಯತೆಯಿಂದಲೂ ದೇವರಿಂದ ಹೊಂದಿದ್ದನು (ಯೋಹಾನ 5:26).

*"ಕಾಪಾಡುವನು"*– ಅಂದರೆ, ಕ್ರಿಸ್ತನು ವಿಶ್ವಾಸಿಯನ್ನು ಕಾಪಾಡುವನು (ಯೋಹಾನ

10:28; ರೋಮಾ 5:9-10).

*“ಕೆಡುಕನು”*– ಸೈತಾನನು.

*“ಅವನನ್ನು ಹಿಡಿಯುವದಿಲ್ಲ”*– ಅಥವಾ “ಅವನನ್ನು ಮುಟ್ಟುವುದಿಲ್ಲ” (KJV); ಅದೇ ರೀತಿಯ ಕ್ರೀಯಾ ಪದವನ್ನು “ನನ್ನನ್ನು ಹಿಡಿಯಬೇಡ” ಎಂದು ಯೋಹಾನ 20:17 ರಲ್ಲಿ ಅನುವಾದಿಸಲಾಗಿದೆ. ಸೈತಾನನು ಅವನ ಕೈಯನ್ನು ವಿಶ್ವಾಸಿಯ ಮೇಲೆ ಇಡಲು ಸಾಧ್ಯವಿಲ್ಲ, ಅವನ ಶಕ್ತಿಯಿಂದ ಅವರನ್ನು ಹಿಡಿಯಲು ಸಾಧ್ಯವಿಲ್ಲ. ಅವರೊಳಗೆ ಕ್ರಿಸ್ತನಿದ್ದಾನೆ ಮತ್ತು ಆತನು ಸೈತಾನನಿಗಿಂತಲೂ ಹೆಚ್ಚಿನವನಾಗಿದ್ದಾನೆ (4:4). ಯೋಹಾನನು ಇಲ್ಲಿ ಹೇಳುತ್ತಿರುವದು ಹೊಸದಾಗಿ ಹುಟ್ಟಿದವರೆಲ್ಲರ ವಿಷಯವಾಗಿ ಇದು ಸತ್ಯವಾಗಿದೆ, ಅಸಾಧಾರಣ ಸಂತರಿಗೆ ಮಾತ್ರವಲ್ಲ. **19**

**5:19** *“ಗೊತ್ತದೆ”*– ಈ ಪತ್ರಿಕೆಯಲ್ಲಿ ವಿಶ್ವಾಸಿಗಳಿಗೆ “ಗೊತ್ತಿರುವ” –ಸಂಗತಿಗಳು ಯಾವುವೆಂದು ಯೋಹಾನನು ಹೇಳುತ್ತಾನೆ ನೋಡಿರಿ – 2:5,20; 3:2,5,14,16,19,24; 4:16; 5:13,15,18,20.

*“ಕೆಡುಕನ”*– 2:16, ಅಥವಾ “ಕೆಡುಕನ ವಶದಲ್ಲಿ”. ಯೋಹಾನ 14:30; 2 ಕೊರಿಂಥ 4:4; ಎಫೆ 2:2; 2 ತಿಮೊ 2:26 ನೋಡಿರಿ. ಆದ್ದರಿಂದಲೇ ಈ ಲೋಕವು ದೇವರಿಲ್ಲದ ದುಷ್ಟ ಸ್ಥಳದಲ್ಲಿದೆ. **20**

**5:20** *“ನಮಗೆ ವಿವೇಕವನ್ನು ಕೊಟ್ಟಿದ್ದಾನೆ”*– ಲೂಕ 24:45; 1 ಕೊರಿಂಥ 2:12,16 ಹೋಲಿಸಿರಿ.

*“ಆತನನ್ನು ಅರಿತುಕೊಳ್ಳುವ ಹಾಗೆ”*– ಮತ್ತಾಯ 11:27. ದೇವರನ್ನು ಅರಿತುಕೊಳ್ಳುವುದಕ್ಕೆ ಇರುವ ಒಂದೇ ಮಾರ್ಗವಾಗಿದೆ.

*“ಕ್ರಿಸ್ತನಲ್ಲಿ”*– ಯೋಹಾನ 17:21-23; 1 ಕೊರಿಂಥ 12:12-13; ಎಫೆ 1:3-4. ಲೋಕವು ಕೆಡುಕನ “ವಶದಲ್ಲಿದೆ” ವಿಶ್ವಾಸಿಗಳು “ಕ್ರಿಸ್ತನಲ್ಲಿದ್ದಾರೆ” ಫಿಲಿಪ್ಪಿ 2:6; ಲೂಕ 2:11 ಉಲ್ಲೇಖಗಳನ್ನು ನೋಡಿರಿ. ಆತನು ನಿತ್ಯಜೀವವು ಸಹ ಆಗಿದ್ದಾನೆ (ವ. 11; ಯೋಹಾನ 11:25; 14:6). ದೇವರನ್ನು ಮಾತ್ರ ನಿತ್ಯಜೀವವಾಗಿದ್ದಾನೆ ಎಂದು ಹೇಳಬಹುದು. **21**

**5:21** *“ವಿಗ್ರಹಗಳಿಗೆ”*– ಅವನು ಸತ್ಯ ದೇವರ ಬಗ್ಗೆ ಮಾತಾಡಿದ್ದಾನೆ, ಮತ್ತು ಇದು ಸುಳ್ಳು ದೇವರುಗಳ ವಿಷಯವನ್ನು ಅವನ ಮನಸ್ಸಿಗೆ ತಂದಿದೆ. ಮನುಷ್ಯರು ಆರಾಧಿಸುವ ಮತ್ತು ಸೇವೆಮಾಡುವ ದೇವರುಗಳು ಸತ್ಯವಲ್ಲ ಮತ್ತು ಅವು ವಿಗ್ರಹಗಳಾಗಿದೆ. ವಿಗ್ರಹವೆಂದರೆ ಭೌತಿಕ ವಸ್ತುವಾಗಿರಬಹುದು ಅಥವಾ ದೇವರು ಹೀಗಿರಬಹುದೆಂಬ ತಪ್ಪು ಕಲ್ಪನೆಯಾಗಿರಬಹುದು. ಎಲ್ಲಾ ರೀತಿಯ ವಿಗ್ರಹಾರಧನೆಗಳಿಂದ ನಮ್ಮನ್ನು ಕಾಪಾಡಿಕೊಳ್ಳೋಣ.
*************************************************************
***********